
ಸಂಪುಟ 20 ಸಂಚಿಕೆ 41
ಅಕ್ಟೋಬರ್ 17,1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

ಕೇಂದ್ರದಲ್ಲಿ ಮತ್ತೆ ಅಸ್ಥಿರತೆ



ಕೋಮುವಾದಿಗಳನ್ನು ನಿರಾಕರಿಸಿದ ಕರ್ನಾಟಕ



ಕಾಂಗ್ರೆಸ್ ಪಾಠ ಕಲಿಯಬೇಕು



1947 EARTH

ಕಾಂಗ್ರೆಸ್ ಪಾಠ ಕಲಿಯಬೇಕು

ಕರ್ನಾಟಕದ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿ ಮತ್ತು ಜನತಾದಳ(ಯು)ನ ಸಂದರ್ಭಸಾಧಕ ಮೈತ್ರಿಕೂಟವನ್ನು ಗಣನಿಯವಾಗಿ ಸೋಲಿಸಿದ ಮತದಾರರನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿನಂದಿಸಿದೆ. ಇದು ಮತ ನಿರಪೇಕ್ಷಿತ ಶಕ್ತಿಗಳ ವಿಜಯವಾಗಿದೆ. ಕರ್ನಾಟಕವನ್ನು ಕೋಮುವಾದಿಗಳ ನೆಲೆಯಾಗದಂತೆ ಮತನಿರಪೇಕ್ಷಿತವಾಗಿ ಉಳಿಸಬೇಕು, ಕೋಮುವಾದಿಗಳ ಕೂಟವನ್ನು ಸೋಲಿಸಬೇಕೆಂದು (ಸಿಪಿಐ(ಎಂ)) ಮತದಾರರಲ್ಲಿ ವಿನಂತಿಸಲಾಗಿತ್ತು. ವಾಜಪೇಯಿ ವರ್ಚಸ್ಸಾಗಲಿ, ಕಾರ್ಗಿಲ್ ಕದನವಾಗಲಿ, ಸ್ವದೇಶಿ-ವಿದೇಶಿ ಎಂಬ ಪ್ರಶ್ನೆಗಳನ್ನು ಜನತೆ ತಿರಸ್ಕರಿದ್ದಾರೆ.

ರಾಜ್ಯದಲ್ಲಿ ಅಧಿಕಾರ ವಹಿಸಿ ಕೊಳ್ಳಲಿರುವ ಕಾಂಗ್ರೆಸ್ ಪಕ್ಷವು ದೆಹಲಿ, ರಾಜಸ್ಥಾನ, ಮಧ್ಯಪ್ರದೇಶ ಹರಿಯಾಣದಂತಹ ರಾಜ್ಯಗಳ ಫಲಿತಾಂಶದಿಂದ ಪಾಠಕಲಿಯಬೇಕಿದೆ. ಕೆಲವೇ ತಿಂಗಳುಗಳ ಹಿಂದೆ ಬಿಜೆಪಿ ಯನ್ನು ತಿರಸ್ಕರಿಸಿ, ಆ ರಾಜ್ಯಗಳ ಜನತೆ ಕಾಂಗ್ರೆಸ್‌ನ್ನು ಆಯ್ಕೆ ಮಾಡಿದ್ದರು. ಆದರೆ ಕಾಂಗ್ರೆಸ್ ಜನತೆ ಇಟ್ಟ ವಿಶ್ವಾಸ ಹಾಗೂ ಕೊಟ್ಟ ಭರವಸೆಗಳಿಗೆ ಸ್ಪಂದಿಸದೇ ಜನರು ಅನುಭವಿಸುತ್ತಿರುವ ದಿನನಿತ್ಯದ ಬೆಲೆ ಏರಿಕೆ, ವಸತಿ, ನಾಗರೀಕ ಸೌಲಭ್ಯ ಗಳಂತಹ ಜೀವನದ ದಿನನಿತ್ಯದ

ಸಂಪಾದಕೀಯ

ಸಮಸ್ಯೆಗಳಿಗೂ ಪರಿಹಾರ ನೀಡಲು ಮುಂದಾಗಲಿಲ್ಲ. ಜನರಿಗೆ ಹೊರೆಯಾಗುವ ದಿವಾಳಿಖೋರ ಹೊಸ ಆರ್ಥಿಕ ನೀತಿಗಳನ್ನು ಕೈಬಿಡಲಿಲ್ಲ. ಕೋಮುವಾದದ ಅಪಾಯಗಳನ್ನು ಎದುರಿಸಿ ಹೋರಾಡಲಿಲ್ಲ. ಹೀಗಾಗಿ ಈ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ್ನು ಅಲ್ಲಿನ ಜನತೆ ತಿರಸ್ಕರಿಸಿದ್ದಾರೆ. ಇದರ ಫಲವಾಗಿ ಲೋಕಸಭೆಯಲ್ಲಿ ಕಾಂಗ್ರೆಸ್ ಸ್ಥಾನ ಎಂದೆಂದೂ ಇಳಿಯದ ಮಟ್ಟ ಕ್ಕಿಳಿದಿದೆ. ದೇಶದ ಹಿತದೃಷ್ಟಿಯಲ್ಲಿ ಇದು ಅತ್ಯಂತ ದುಬಾರಿ ಬೆಲೆಯಾಗಿದೆ. ಕರ್ನಾಟಕದ ಕಾಂಗ್ರೆಸ್ ಸಹ ಇದರಿಂದ ಪಾಠ ಕಲಿತು ಅದರ ನೀತಿಗಳನ್ನು ಬದಲಾಯಿಸಿ ಕೊಳ್ಳಬೇಕಿದೆ.

ಆದರೆ ಈ ಚುನಾವಣಾ ಪ್ರಚಾರದ ಸಮಯದಲ್ಲಾಗಲೀ, ಅದಕ್ಕೆ ಸಿದ್ಧತೆಯಾಗಿ ಜರುಗಿದ ಪಾಂಚಜನ್ಯ ಯಾತ್ರೆಗಳಲ್ಲಾಗಲೀ ಇಂತಹ ಪ್ರಶ್ನೆಗಳನ್ನು ಎತ್ತಲಿಲ್ಲ. ಜನರ ಆಶೋತ್ತರಗಳನ್ನು ಬಿಂಬಿಸಲಿಲ್ಲ. ಜನರ ಆಶೋತ್ತರಗಳಿಗೆ ಸ್ಪಂದಿಸದೇ ಹೋದಲ್ಲಿ ರಾಜ್ಯದ ಜನತೆ ರಾಜ್ಯದಲ್ಲಿಯೂ ತಕ್ಕ ಉತ್ತರ ಹೇಳುತ್ತಾರೆ.

ಕಳೆದ ಐದು ವರುಷಗಳ ಆಡಳಿತ ನಡೆಸಿದ ಜನತಾದಳವು ಜನರ ಜೀವ ಹಿಂಡುವ ಆರ್ಥಿಕ ನೀತಿಗಳನ್ನೇ ಮುಂದುವರಿಸಿತು. ತಮ್ಮ ಬದುಕು ಸುಧಾರಿಸಬೇಕೆಂದು, ಬದುಕುಳಿಯ ಬೇಕೆಂದು ಹೋರಾಟ ನಡೆಸಿದ ಕಾರ್ಮಿಕರು, ರೈತಾಪಿ-ಕೂಲಿಕಾರರ ವಿಭಾಗಗಳ ಮೇಲೆ ದಬ್ಬಾಳಿಕೆ ನಡೆಸಲಾಯಿತು. ಗೋಲೀಬಾರ್ ಸಹ ನಡೆಸಿ, ಅನೇಕರನ್ನು ಬಲಿತೆಗೆದು ಕೊಳ್ಳಲಾಯಿತು. ಜನತೆ ಸ್ಥಳೀಯ ಸ್ಥಾಪಿತ ಹಿತಾಸಕ್ತಿಗಳಿಂದ ಧಾಳಿ, ದಬ್ಬಾಳಿಕೆ ಅನುಭವಿಸುತ್ತಿರುವಾಗ ಜನರ ರಕ್ಷಣೆಗೆ ಧಾವಿಸಲಿಲ್ಲ. ಕೋಮುವಾದವನ್ನು ಎದುರಿಸಲು ರಾಜಕೀಯ ನಿಷ್ಕ್ರಿಯತೆ ತೋರಲಾಯಿತು. ಅಧಿಕಾರಕ್ಕಾಗಿ ಕಚ್ಚಾಟದಲ್ಲಿ ತೊಡಗಿ ಪಕ್ಷ ವಿಭಜನೆಯಾಯಿತು. ಪಟೇಲರ ನೇತೃತ್ವದ ಜನತಾದಳ(ಯು) ಹೇಗಾದರೂ ಅಧಿಕಾರ ಹಿಡಿಯಬೇಕೆಂದು ಕೋಮುವಾದಿಗಳ ಜೊತೆ ಕೈಜೋಡಿಸಿತು. ಕರ್ನಾಟಕವನ್ನು ಕೋಮುವಾದಿಗಳ ತೆಕ್ಕೆಗೆ ನೂಕಲು ಮುಂದಾದ ರಾಮಕೃಷ್ಣ ಹೆಗಡೆ, ಜಾರ್ಜ್ ಫರ್ನಾಂಡೀಸ್, ಪಟೇಲರ 'ತ್ರಿಮೂರ್ತಿ'ಗಳ ಪ್ರಯತ್ನಕ್ಕೆ ರಾಜ್ಯದ ಜನತೆ ಸರಿಯಾದ ಪ್ರಹಾರ ನೀಡಿದ್ದಾರೆ.

ಕರ್ನಾಟಕದ ಜನತೆಯ ಜ್ವಲಂತ ಪ್ರಶ್ನೆಗಳಾಧಾರದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ, ಮತ್ತು ನಿರಪೇಕ್ಷಿತ ಶಕ್ತಿಗಳೊಂದಿಗೆ ಪ್ರಬಲ ಆಂದೋಲನವನ್ನು ಕಟ್ಟಿ ಬೆಳೆಸಬೇಕಿದೆ



ಎಲ್ಲರೂ ಚಾಲಕರೆ

ಕರ್ನಾಟಕದ ಲೋಕಸಭಾ ಫಲಿತಾಂಶಗಳು

ಕ್ಷೇತ್ರ	ಗೆದ್ದ ಅಭ್ಯರ್ಥಿಗಳು	ಕಾಂಗ್ರೆ	ಬಿಜೆಪಿ-ಜೆಡಿ(ಯು)	ಜೆಡಿ(ಎಸ್)
ಕಾಂಗ್ರೆಸ್				
1. ಮೈಸೂರು	ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್	338015	3,24772	1,90030
2. ಮಂಡ್ಯ	ಅಂಬರೀಶ್	4.18110	82525	2,65,930
3. ಬಳ್ಳಾರಿ	ಸೋನಿಯಾಗಾಂಧಿ	4,14,650	3,58,530	28,855
4. ಹಾಸನ	ಜಿ. ಪುಟ್ಟಸ್ವಾಮಿಗೌಡ	3,98,344	1,71,604	2,56,587
5. ಕನಕಪುರ	ಎಂ.ವಿ. ಚಂದ್ರಶೇಖರ್‌ಮೂರ್ತಿ	5,33,652	4,99,101	
6. ಬೆಂಗಳೂರು ಉತ್ತರ	ಸಿ.ಕೆ. ಜಾಫರ್ ಷರೀಫ್	5,25,885	3,50,000	1,05,912
7. ಚಿಕ್ಕಬಳ್ಳಾಪುರ	ಆರ್.ಎಲ್. ಜಾಲಪ್ಪ	3,39,867	1,92,488	1,23,914
8. ಕೋಲಾರ (ಮಿ)	ಕೆ.ಹೆಚ್. ಮುನಿಯಪ್ಪ	3,21,964	2,39,182 (ಬಿಜೆಪಿ)	26,754
9. ತುಮಕೂರು	ಜಿ.ಎಸ್. ಬಸವರಾಜ್	3,18,922	2,54,985	1.90,295
10. ಶಿವಮೊಗ್ಗ	ಎಸ್. ಬಂಗಾರಪ್ಪ	4,27,870	3,32,832	
11. ಉಡುಪಿ	ವಿನಯಕುಮಾರ್ ಸೊರಕೆ	3,51,197	3,17,466	
12. ಕೆನರಾ	ಮಾರ್ಗರೇಟ್ ಆಳ್ವ	3,56,694	3,46,053	36,328
13. ರಾಯಚೂರು	ಎ. ವೆಂಕಟೇಶನಾಯ್ಕ	3,59,946	1,87,740	63,844
14. ಗುಲ್ಬರ್ಗ	ಇಕ್ಬಾಲ್ ಅಹ್ಮದ್	3,51,740	2,81,931	2,81,931
15. ಕೊಪ್ಪಳ	ಹೆಚ್.ಜಿ. ರಾಮುಲ	3,50,599	3,38,287	50,084
16. ಬೆಳಗಾವಿ	ಅಮರಸಿಂಹ ವಸಂತರಾವ ಪಾಟೀಲ	3,83,444	3,35,546	48,584
17. ಬಾಗಲಕೋಟೆ	ರುದ್ರಗೌಡ ಎಸ್. ಪಾಟೀಲ	3,78,488	3.02,045	72,422
18. ಧಾರವಾಡ ದಕ್ಷಿಣ	ಐ.ಜಿ. ಸನದಿ	3,55,523	3,15,325	96,943
ಬಿಜೆಪಿ				
19. ಬೆಂಗಳೂರು ದಕ್ಷಿಣ	ಅನಂತಕುಮಾರ್	3,44,107		4,10,161
20. ಧಾರವಾಡಉತ್ತರ	ವಿಜಯಶಂಕೇಶ್ವರ	3,03,595	3,45,197	71,147
21. ಚಿಕ್ಕಮಗಳೂರು	ಡಿ.ಸಿ. ಶ್ರೀಕಂಠಪ್ಪ	2,94,193	3,24,470	70,292
22. ದಾವಣಗೆರೆ	ಮಲ್ಲಿಕಾರ್ಜುನಪ್ಪ	3,82,700	3,98,969	64,705
23. ಬೀದರ್ (ಮಿ)	ರಾಮಚಂದ್ರವೀರಪ್ಪ	1,98,188	3,50,221	1,12,423
24. ಬಿಜಾಪುರ	ಬಸವನಗೌಡ ಪಾಟೀಲ	3,12,177	3,48,816	38,398
25. ಮಂಗಳೂರು	ಧನಂಜಯಕುಮಾರ್	3,45,067	3,53,536	20,980
ಜೆಡಿ (ಯು)				
26. ಚಾಮರಾಜನಗರ(ಮಿ)	ವಿ. ಶ್ರೀನಿವಾಸಪ್ರಸಾದ್	2,95,398	3,11,542	1,07,556
27. ಚಿಕ್ಕೋಡಿ (ಮಿ)	ರಮೇಶಜಿಗಜಿಣಗಿ	3,07,860	3,92,450	15,575
28. ಚಿತ್ರದುರ್ಗ	ಶಶಿಕುಮಾರ್	3,60,056	3,71,233	1,01,468

ಆಂಧ್ರಪ್ರದೇಶ ಲೋಕಸಭಾ ಕ್ಷೇತ್ರ

ಒಟ್ಟು ಸ್ಥಾನಗಳು 42

	1999	1998
ಟಿ.ಡಿ.ಪಿ	29	12
ಬಿಜೆಪಿ	7	4
ಕಾಂಗ್ರೆಸ್-ಐ	5	22
ಮುಸ್ಲಿಂ ಮಜಲೀಸ್	1	1
ಜನತಾದಳ	0	1
ಸಿಪಿಐ	0	2

ಆಂಧ್ರಪ್ರದೇಶ ವಿಧಾನಸಭೆ

ಒಟ್ಟು ಸ್ಥಾನಗಳು 294

	1999	1994
ತೆಲಗು ದೇಶಂ	180	219
ಕಾಂಗ್ರೆಸ್(ಐ)	90	25
ಬಿಜೆಪಿ	12	3
ಎ.ಐ.ಎಂ.ಐ.ಎಂ.	4	0
ಸಿ.ಪಿ.ಐ(ಎಂ)	2	15
ಪಕ್ಷೇತರ	5	11

ತಮಿಳುನಾಡು ಲೋಕಸಭಾ ಕ್ಷೇತ್ರ

ಒಟ್ಟು ಸ್ಥಾನಗಳು - 40

	1999	1998
ಎನ್.ಡಿ.ಎ ಮತ್ತು ಮಿತ್ರಪಕ್ಷಗಳು		
ಡಿ.ಎಂ.ಕೆ	12	5
ಬಿಜೆಪಿ	4	3
ಪಿ.ಎಂ.ಕೆ.	5	4
ಎಂ.ಡಿ.ಎಂ.ಕೆ	4	3
ಟಿ.ಆರ್.ಸಿ	0	1
ಎಂ.ಜಿ.ಆರ್. ಎ.ಡಿ.ಎಂ.ಕೆ	1	0
ಎಂ.ಜಿ.ಆರ್. ಕಾಜಗಮ್	1	0
ಕಾಂಗ್ರೆಸ್ ಮಿತ್ರ ಪಕ್ಷಗಳು		
ಎ.ಐ.ಎ.ಡಿ.ಎಂ.ಕೆ.	10	18
ಕಾಂಗ್ರೆಸ್	2	1
ಸಿಪಿಐ(ಎಂ)	1	0
ಸಿಪಿಐ	0	0
ಐ.ಎನ್.ಎಲ್	0	0

ಮಹಾರಾಷ್ಟ್ರ ವಿಧಾನಸಭೆ

ಒಟ್ಟು ಸ್ಥಾನಗಳು 288

	1999
ಬಿ.ಜೆ.ಪಿ-ಶಿವಸೇನೆ	125
ಕಾಂಗ್ರೆಸ್,	75
ಎನ್.ಸಿ.ಪಿ.	58
ಪಕ್ಷೇತರರು	12
ಇತರೆ	18

ಮಹಾರಾಷ್ಟ್ರ ಲೋಕಸಭಾ

ಒಟ್ಟು ಸ್ಥಾನಗಳು 48

ಬಿ.ಜೆ.ಪಿ.-ಶಿವಸೇನೆ	28
ಕಾಂಗ್ರೆಸ್	10
ಎನ್.ಸಿ.ಪಿ.	7
ಇತರೆ	3

ಕೋಮುವಾದಿಗಳನ್ನು ನಿರಾಕರಿಸಿದ ಕರ್ನಾಟಕ

ಜಿ.ಎನ್.ನಾಗರಾಜ್

ಕರ್ನಾಟಕವನ್ನು ತಮ್ಮ ಆಡುಂಬೊಲವನ್ನಾಗಿ ಮಾಡಿಕೊಳ್ಳುವ ಅತೀವ ಬಯಕೆಯಿಂದ ದಕ್ಷಿಣ ಭಾರತದಲ್ಲೆಲ್ಲೂ ನೆಲೆಯಿರದ ಬಿಜೆಪಿ ಮತ್ತು ಸಂಘಪರಿವಾರ ಹಿಂದಿನ ದಶಕವೆಲ್ಲಾ ಆಡಿದ ಆಟವೇನು? ಹೂಡಿದ ಕುತಂತ್ರಗಳೇನು? ಅದಕ್ಕೆ ಕರ್ನಾಟಕದ ಜನತೆ ತೆತ್ತ ಬೆಲೆಯೇನು?

ಕರ್ನಾಟಕದ ಜನತೆಯ ಮನಮನದಲ್ಲಿ ಕೋಮು ವಿಷವನ್ನೂಡಿಸಲು, ಮನೆ ಮನೆಗೆ ಕೋಮುಜ್ವಾಲೆ ಹಬ್ಬಿಸಲು ಎಷ್ಟು ಪ್ರಯತ್ನಗಳು? ತೆರತೆರನ ಪ್ರಯತ್ನಗಳು!

ದ.ಕರ್ನಾಟಕದಲ್ಲಿ ಅದ್ವಾನಿಯವರ ರಥಯಾತ್ರೆಯ ನಂತರ ಬಿರುಸಾದ ಈ ಕುಕೃತ್ಯಗಳು ರಾಮಜ್ಯೋತಿ ಯಾತ್ರೆ, ಚಪ್ಪಲಿ ಪೂಜೆ ಇತ್ಯಾದಿಗಳ ನೆಪದಲ್ಲಿ ಹಿಂದೂಗಳ ಒಳಗೇ ಹಿಂದು ಯಾರು? ಯಾರಲ್ಲ? ಎಂದು ವಿಭಜನೆ ಮಾಡಿದ್ದು, ಕೋಲಾರ, ರಾಮನಗರ, ಚನ್ನಪಟ್ಟಣ, ಬೆಂಗಳೂರು, ಮೈಸೂರು, ಕೊಡಗು ಮುಂತಾದ ಹಲವು ಕಡೆ ಕೋಮುಗಲಭೆಗಳು, ಸಾವು ನೋವುಗಳು ಇವು 91 ರ ಚುನಾವಣೆಯಲ್ಲಿ ದಕ್ಷಿಣ ಕರ್ನಾಟಕದಲ್ಲಿ ತಾತ್ಕಾಲಿಕವಾಗಿ ಕೆಲವು ಸ್ಥಾನಗಳನ್ನು ತುದುಕೊಟ್ಟರೆ ಈ ಭಯಂಕರ ಅನುಭವದಿಂದ ಹೊರಬರಲು ಈ ಪ್ರದೇಶದ ಜನತೆ ಇನ್ನೂ ಹೆಣಗುತ್ತಿದ್ದಾರೆ.

ಉತ್ತರ ಕರ್ನಾಟಕದಲ್ಲಿ .

ನಂತರ ಕರ್ನಾಟಕದಲ್ಲೊಂದು ಅಯೋಧ್ಯೆಯಾಗಿ ಹುಬ್ಬಳ್ಳಿಯ ಈದ್ಗಾ, ಬೂಟಾಟಿಕೆಯ ಲಿಂಗಾಯಿತ ಸನ್ಯಾಸಿನಿಯರನ್ನು ಮುಂದಿಟ್ಟು ಲಿಂಗಾಯಿತರನ್ನು ಸಳೆದು ಕೊಳ್ಳಲು ಎತ್ತಿದ ಬಸವೇಶ್ವರ ವಿಶ್ವ ವಿದ್ಯಾಲಯ, ಮಹಾಚೈತ್ರ, ಧರ್ಮಕಾರಣ ಸಾಹಿತ್ಯ ಕೃತಿಗಳ ಪ್ರಶ್ನೆ, ಬಸವ ಜ್ಯೋತಿ, ರಥಯಾತ್ರೆ, ವೀರ ಶೈವ ಮಠಾಧಿಪತಿಗಳನ್ನು ಸಳೆದುಕೊಳ್ಳುವ ಪ್ರಯತ್ನಗಳು.

ಇವು ರಾಜ್ಯ ಲಿಂಗಾಯಿತ ಭೂಮಾಲಿಕ ರಾಜಕಾರಣಿಗಳನ್ನೆಲ್ಲಾ ಧ್ರುವೀಕರಿಸಿಕೊಳ್ಳಲು ನೆರವಾದರೂ ಜನತೆಯನ್ನು ಅಂಶಿಕವಾಗಿ ಮಾತ್ರ ಸೆಳೆಯಲು ಸಾಧ್ಯವಾಗಿದೆ.

ಹಾಗೆಯೇ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಪ್ರತ್ಯೇಕತೆಯ ಪ್ರಶ್ನೆ, ನೇರುತ್ಯ ವಲಯ ರೈಲ್ವೆ, ಹೈ. ಕರ್ನಾಟಕ ವಿಮೋಚನಾ ದಿನ, ಪಟೇಲ್ ಮೂರ್ತಿ ಸ್ಥಾಪನೆ, ಕೃಷ್ಣಾ ನದಿ ನೀರು ಹಂಚಿಕೆ ಇವುಗಳನ್ನೆಲ್ಲಾ ಎತ್ತಿ ನಿರಂತರವಾಗಿ ಜನಮನವನ್ನು ಕಲುಷಿತಗೊಳಿಸಲು ನಡೆದ ಪ್ರಯತ್ನಗಳನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಕರಾವಳಿ ಘಟ್ಟಗಳಲ್ಲಿ

ಇನ್ನು ಕರಾವಳಿಯಲ್ಲಿ ಒಂದಾದ ಮೇಲೊಂದರಂತೆ ಕುಂದಾಪುರ, ಭಟ್ಕಳ, ಹೊನ್ನಾವರ ಸುಳ್ಯ, ಪುತ್ತೂರು, ಸುರತ್ಕಲ್, ಮಂಗಳೂರು ಇವುಗಳಲ್ಲಿ ಹತ್ತಿದ ಕೋಮುಜ್ವಾಲೆ ನಂದದಂತೆ, ದ್ವೇಷ ಹೊತ್ತಿ ಉರಿಯುವಂತೆ ಮಾಡಿದ ಪ್ರಯತ್ನಗಳು, ಮೀನು ಹಿಡಿಯುವವರ ಹಾಗೂ ಮಾರಾಟಗಾರರ ನಡುವೆ ದ್ವೇಷ ಹುಟ್ಟಿಸುವುದು, ವಿದ್ಯಾವಂತ ನಿರುದ್ಯೋಗಿಗಳಿಗೆ ಮಂಕು ಬೂದಿ ಎರಚಲು ಮೀಸಲಾತಿ ವಿರೋಧಿ, ಖಾಸಗೀಕರಣ ಪರ ನಿಲುವುಗಳು, ಪರಿಸರ, ಚಳುವಳಿ, ಕೊಡಗು ಪ್ರತ್ಯೇಕತಾವಾದಿ ಚಳುವಳಿ ಇವೆಲ್ಲವುಗಳಿಗೂ ಕುಮ್ಮಕ್ಕು

1991,1994 ರ ಚುನಾವಣೆಗಳಲ್ಲಿ ಫಲ

ಈ ಎಲ್ಲ ಕುತಂತ್ರಗಳು ಸಮಾಜ ವಿಧ್ವಂಸಕ ಕೃತ್ಯಗಳೂ ಸ್ವಲ್ಪ ಸ್ವಲ್ಪವಾಗಿ ಫಲಿಸುತ್ತಾ 1991 ರ ಲೋಕ ಸಭಾ ಚುನಾವಣೆಯಲ್ಲಿ ಬಿಜೆಪಿಗೆ ಪ್ರಥಮ ಬಾರಿಗೆ ನಾಲ್ಕು ಲೋಕಸಭಾ ಸ್ಥಾನಗಳನ್ನು ಗಳಿಸಿಕೊಡುವಲ್ಲಿ ಹಾಗೂ ಕರಾವಳಿ ಮತ್ತು ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಮತಗಳನ್ನು ಶೇ(32-36) ಗಳಿಸಿಕೊಟ್ಟಿತು. ಈ ಚುನಾವಣೆಗಳಲ್ಲಿ ಸುಮಾರು 112 ವಿಧಾನ ಸಭಾ ವಿಭಾಗಗಳಲ್ಲಿ ಬಹು ಮತ ಸಿಕ್ಕಿದೆಯೆಂದೂ ಮುಂದೆ ತಾವೇ ಕರ್ನಾಟಕದ ಪಟ್ಟಕ್ಕೆ ವಾರಸುದಾರರೆಂದು ಬಿಜೆಪಿ ಬೀಗಿತು. ಆರೆಸ್ಸೆಸ್ ಹಾಗೂ ಬಿಜೆಪಿ ಕೇಂದ್ರ ನಾಯಕತ್ವವೂ ಕರ್ನಾಟಕದ ಮೇಲೆ ಕೇಂದ್ರಿಕರಿಸಿ ಕೆಲಸ ಮಾಡಲು ಆರಂಭಿಸಿತು. ಆದರೆ 1994ರ ವಿಧಾನ ಸಭಾ ಚುನಾವಣೆಗಳಲ್ಲಿ ಬಿಜೆಪಿಯ ಸ್ಥಾನಗಳು 1984 ರಲ್ಲಿ ಪಡೆದ ನಾಲ್ಕರಿಂದ ನಲ್ವತ್ತಕ್ಕೆ ಏರಿತು ಎಂಬುದು ಆಘಾತಕರವಾದರೂ ಕರ್ನಾಟಕದಲ್ಲಿ ರಾಜ್ಯ ಭಾರ ಮಾಡುವ ಕನಸನ್ನು ಕರ್ನಾಟಕದ ಜನತೆ ವಿಫಲಗೊಳಿಸಿದರು. 1989 ರಿಂದ 94ರ ವರೆಗೆ ಆಡಳಿತ ಮಾಡಿದ ಕಾಂಗ್ರೆಸ್ ಬಗೆಗಿನ ಕೆಲವು ಅತೃಪ್ತಿ ಕೋಮುವಾದಿಗಳತ್ತ ಒಲಿಯದೆ ಜಾತ್ಯತೀತ ದಾರಿಯನ್ನೇ ಬಯಸಿತು ಎಂಬುದು ಗಮನಾರ್ಹ: ಕರ್ನಾಟಕ ಕಾಂಗ್ರೆಸ್ - ಭಿಜೆಪಿಯನ್ನು ದೂರ ಮಾಡುವ ಮೂರನೇ ಶಕ್ತಿಯು ನೆಲೆಯೆಂದು ಮತ್ತೊಮ್ಮೆ ಸಾಬೀತಾಯಿತು.

1998 ರಲ್ಲಿ ಗರಿಷ್ಠ ಫಲ

1994 ರ ಚುನಾವಣೆಯ ಫಲಿತಾಂಶ ಹಾಗೂ ದೇವೇಗೌಡರ ರಾಜ್ಯ ಸರ್ಕಾರ ಸಾಧ್ಯವಾದಷ್ಟೂ ವಿವಿಧ ಬೆಲೆ ದರಗಳ ಏರಿಕೆಯನ್ನು ತಡೆಹಿಡಿದ ಪರಿಣಾಮವಾಗಿ 1996 ರಲ್ಲಿ ಜನತಾ ದಳ ಗರಿಷ್ಠ ಫಲವನ್ನು ಪಡೆಯಿತು. ಆದರೆ ಬಿಜೆಪಿಯ ಸ್ಥಾನ 4 ರಿಂದ ಆರಕ್ಕೇರಿತು. ಸುಮಾರು 11 ಕ್ಷೇತ್ರಗಳಲ್ಲಿ ಬಿಜೆಪಿ ನೇರ ಸವಾಲನ್ನು ಎಸೆಯುವಂತೆ ಬೆಳೆದಿತು. ಕರಾವಳಿ ಮತ್ತು ಉತ್ತರ ಕರ್ನಾಟಕದ ಕೆಲ ಪ್ರದೇಶಗಳು, ದ.ಕರ್ನಾಟಕ ನಗರಗಳು ಅದರ ಮುಖ್ಯ ನೆಲೆಗಳಾಗಿ ಪರಿವರ್ತಿತವಾಗಿದ್ದವು.

1998 ರ ಚುನಾವಣೆಯ ಸಂದರ್ಭದಲ್ಲಿ ದೇಶ ಮಟ್ಟದಲ್ಲಿ ಪಕ್ಷಾಂತರಗಳ ಮೂಲಕ ಕಾಂಗ್ರೆಸ್ ಕುಸಿತ, ಕೇಂದ್ರದಲ್ಲಿ ಅಧಿಕಾರಕ್ಕೆ ಬಿಜೆಪಿ ಮಾತ್ರ ಬರಲು ಅರ್ಹ ಎನ್ನುವ ಅಬ್ಬರದ ಪ್ರಚಾರ, ಚುನಾವಣೆಯ ದಿನದವರೆಗೂ ಕಾಂಗ್ರೆಸ್ ಸೇರಲು ಪ್ರಯತ್ನಿಸುತ್ತಿದ್ದ ಹೆಗಡೆಯವರ ಲೋಕ ಶಕ್ತಿ ಬಿಜೆಪಿಯ ಜೊತೆ ಕೈ ಜೋಡಿಸಿದ್ದು ಇವೆಲ್ಲಾ ಹಿನ್ನೆಲೆಯಲ್ಲಿ ಬಿಜೆಪಿ ಈ ನೆಲೆಗಳಲ್ಲಿ ಮತ ಹೆಚ್ಚಳವಾಗಿ 13 ಸ್ಥಾನಗಳನ್ನು ಗೆದ್ದಿತು. ಆದರ ಮಿತ್ರಪಕ್ಷವಾಗಿ ಲೋಕಶಕ್ತಿ ಮೂರು ಸ್ಥಾನಗಳನ್ನು ಪಡೆಯಿತು.

ಅಧಿಕಾರಕ್ಕೆ ಬರಲು ಇನ್ನಿಲ್ಲದ ಪ್ರಯತ್ನ

ಕರ್ನಾಟಕದಲ್ಲಿ ಮೊದಲ ಬಾರಿಗೆ 28 ಸ್ಥಾನಗಳಲ್ಲಿ 16 ಸ್ಥಾನಗಳನ್ನು ಪಡೆದ ಹಮ್ಮಿನಿಂದ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಇನ್ನಿಲ್ಲದ ಪ್ರಯತ್ನ ನಡೆಸಿತು.

ಕೇಂದ್ರದಲ್ಲಿ ಅಧಿಕಾರವಿದ್ದುದರ ದುರುಪಯೋಗ, ನದಿ ನೀರಿನ ವಿವಾದ, ಉತ್ತರ ಕರ್ನಾಟಕ ಹಿಂದುಳಿಕೆಯೆಂಬ ಪ್ರಶ್ನೆಗಳ ಜೊತೆಗೆ ಬಾಬಬುಡನ್ ಗಿರಿಯನ್ನು ವಿವಾದ ಗ್ರಸ್ಥವಾಗಿಸುವ ಜಾಥಗಳು, ಅದು ವಿಫಲವಾದಾಗ 'ಸಮೃದ್ಧ ಕರ್ನಾಟಕ' ಎಂಬ ಹೊಸ ನಾಟಕ, ಮತ್ತೆ ಮತ್ತೆ ಕರ್ನಾಟಕದ ಸುತ್ತಾಟ, ಕೇಂದ್ರ ಮಂತ್ರಿಗಳು, ಆರೆಸ್ಸೆಸ್ ನಾಯಕರು ಸೂತ್ರ ಹಿಡಿದ ಬಜರಂಗದಳ, ಯುವ ಮೋರ್ಚಾ, ಆರೆಸ್ಸೆಸ್ ಬೈಠಕ್‌ಗಳು ಒಂದನ್ನು ಬಿಡದಂತೆ ಇನ್ನಿಲ್ಲದ ಪ್ರಯತ್ನ, ಕೊನೆಗೆ ತಮಗೆ ದೊಡ್ಡ ಅಡ್ಡಿಯಾಗಿರುವ ಮೂರನೇ ಶಕ್ತಿಯಾದ ಜ. ದಳವನ್ನು ಒಡೆದು ತುಂಡರಿಸಿದ್ದು. ಇವೆಲ್ಲಾ ಈ ಅವಧಿಯ ಅಪ್ರತಿಮ ಸಾಧನೆಗಳು.

ಹೀಗೆ ಹತ್ತು ವರ್ಷಗಳ ಎಡೆಬಿಡದ ಪ್ರಯತ್ನದಿಂದ ಕರ್ನಾಟಕದಲ್ಲಿ ಅಧಿಕಾರವನ್ನು ಹಿಡಿಯಬೇಕು ನಂತರ ವಿವಾದಗಳ ಮೂಲಕ ಅದನ್ನೊಂದು ಕೋಮುವಾದದ ಭದ್ರ ನೆಲೆಯಾಗಿ ಬೆಳೆಸಬೇಕು ಎಂಬ ಕನಸು ನನಸಾಗಲಿಲ್ಲ ಅಷ್ಟೇ ಅಲ್ಲ ಇಂತಹ ಪ್ರಯತ್ನದ ಮುಖ್ಯ ರೂವಾರಿಗಳಾದ ಯಡಿಯೂರಪ್ಪ, ಈಶ್ವರಪ್ಪ ಇವರು - ಕರ್ನಾಟಕದ ಬಿಜೆಪಿ ಅಧ್ಯಕ್ಷ, ಶಾಸಕಾಂಗ ನಾಯಕರುಗಳು ನೆಲಕಚ್ಚಿದರು.

ಸಂಖ್ಯೆಯ ಲೆಕ್ಕದಲ್ಲಿ ಶಾಸಕ ಸ್ಥಾನಗಳಲ್ಲಿ 40 ರಿಂದ 44 ಸ್ಥಾನಗಳಿಗೇರಿದರೂ ಕೂಡ ಲೋಕಸಭೆಯ 13 ಸ್ಥಾನ 7 ಕ್ಕೆ ಇಳಿದಿದೆ. ಅಷ್ಟು ಮಾತ್ರವಲ್ಲ ತಮ್ಮ ಬಹುಕಾಲದ ಭದ್ರವಾದ ನೆಲೆಯಾದ ಕರಾವಳಿ ಹಾಗೂ ಘಟ್ಟಗಳಲ್ಲಿ ಕಾಂಗ್ರೆಸ್ ಬಿಜೆಪಿಯನ್ನು ಹೊರ ದೂಡಿದೆ. ಈದ್ಗಾ ವಿವಾದದ ವಿಷ ಫಲಗಳಾದ ಧಾರವಾಡ ಜಿಲ್ಲೆಯ ಸ್ಥಾನಗಳು ಸೀಮಿತವಾಗಿವೆ.

ಹೈದರಾಬಾದ್ ಕರ್ನಾಟಕದ ಬಗ್ಗೆ ಎಷ್ಟು ಹಾರಾಡಿದರೂ ಬೀದರ್ ಲೋಕಸಭಾ ಕ್ಷೇತ್ರ, ಬೀದರ್ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳನ್ನು ಮಾತ್ರ ಗಳಿಸಲು ಸಾಧ್ಯವಾಗಿದೆ. ಇಡೀ ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಒಂದು ಸ್ಥಾನವೂ ಇಲ್ಲ, ಗುಲ್ಬರ್ಗದಲ್ಲಿ ಒಂದೇ ಒಂದು ಶಾಸಕ ಸ್ಥಾನ ಮಾತ್ರ.

ಇನ್ನುಳಿದಂತೆ ಬಿಜೆಪಿ ಬೆಂಗಳೂರು, ದಾವಣಗೆರೆ, ಹುಬ್ಬಳಿ-ಧಾರವಾಡ ನಗರ ಅದರ ಆಸುಪಾಸಿಗಳಿಗೆ ಸೀಮಿತವಾಗುವ ಪರಿಸ್ಥಿತಿ ಬಂದೊದಗಿದೆ.

ಬಿಜೆಪಿ-ಆರೆಸ್ಸೆಸ್- ವಿಶ್ವ ಹಿಂದೂ ಪರಿಷತ್, ಬಜರಂಗದಳ, ಹಿಂದೂ ಜಾಗರಣಾ ವೇದಿಕೆ, ಎಬಿವಿಪಿ, ಮಹಿಳಾ ಮೋರ್ಚಾಗಳ ಎಲ್ಲಾ ಕಸರತ್ತನ್ನೂ ಕರ್ನಾಟಕದ ಧರ್ಮನಿರಪೇಕ್ಷ ಮನೋಭಾವದ ಮತದಾರ ಮೂಲೆಗೆ ಎಸೆದಿದ್ದಾನೆ.

ಕರ್ನಾಟಕವನ್ನು ಕೋಮುವಾದಕ್ಕೆ ಅಧೀನ ಮಾಡುವುದಿಲ್ಲ, ನಮ್ಮ ಬಾಳು ಛಿದ್ರವಾಗಲು ಬಿಡುವುದಿಲ್ಲ ಎಂದು ಘೋಷಿಸಿದ್ದಾನೆ.

ನಿರಂತರ ಎಚ್ಚರ ಬೇಕು

ಆದರೆ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷದ ವೈಫಲ್ಯದಿಂದಾಗಿ ಭಾಜಪ ತನ್ನ ಮುಖ್ಯ ನೆಲೆ ಉತ್ತರ ಪ್ರದೇಶದಲ್ಲಿ ಹಲವು ಕಳೆದು ಕೊಂಡರೂ ರಾಷ್ಟ್ರದ ಅಧಿಕಾರದ ಸೂತ್ರ ಮತ್ತೆ ಹಿಡಿದಿದೆ. ಕೇಂದ್ರದ ತನ್ನ ಅಧಿಕಾರವನ್ನೆಲ್ಲಾ ಪ್ರಯೋಗಿಸಿ, ಸಂಘಪರಿವಾರ ತನ್ನೆಲ್ಲಾ ಸಾಮರ್ಥ್ಯವನ್ನು ಒಗ್ಗೂಡಿಸಿ ಮತ್ತೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದೆ.

ಜನತಾ ದಳದ ಪಾತ್ರ

ಹಿಂದಿನ ವಿಧಾನ ಸಭಾ ಚುನಾವಣೆಗಳಲ್ಲಿ 116 ಸ್ಥಾನಗಳನ್ನು ಗಳಿಸಿದ್ದ ಜನತಾ ದಳ ಕಾರ್ಮಿಕ, ರೈತರ ಚಳುವಳಿಗಳನ್ನು ದಮನ ಮಾಡುವ ತನ್ನ ಅಧಿಕಾರ ಶಾಹಿ ದರ್ಪದಿಂದ, ಹೊಸ ಆರ್ಥಿಕ ನೀತಿಯ ಗುಲಾಮನಂತೆ ವರ್ತಿಸಿದುದರಿಂದ ಜನರಿಂದ ದೂರವಾಯಿತು. ಅದರ ಜೊತೆಯಲ್ಲಿಯೇ ಅಂತರಿಕ ಕಲಹಗಳಿಂದ ಜನರಲ್ಲಿ ಅಸಹ್ಯ ಹುಟ್ಟುವಂತಾಯಿತು. ಜನ ಅದನ್ನು ಅಧಿಕಾರದಿಂದ ಇಳಿಸುವ ಮೊದಲೇ ತನ್ನ ಅಸ್ತಿತ್ವವನ್ನೇ ಕಳೆದು ಕೊಂಡಿತು.

ಜನತಾದಳವನ್ನೊಡೆಯಲು ಮುಖ್ಯ ಕಾರಣರಾದ ಹೆಗ್ಗಡೆ ವಾಜಪೇಯಿ- ಪಟೇಲ್ ಕೂಟದ ಸಂಚು ಸಂಪೂರ್ಣ ವಿಫಲವಾಯಿತು. ಮುಖ್ಯ ಮಂತ್ರಿ ಪಟೇಲ್ ಅವಮಾನಕರವಾದ ಸೋಲನ್ನಪ್ಪಿದರು. ಜನತಾದಳ ಜಾತ್ಯಾತೀತದ ಧುರೀಣರೂ ಸೋಲನ್ನಪ್ಪಿದರು.

ಇಷ್ಟಾದರೂ ಜನತಾದಳ ಜಾತ್ಯಾತೀತ 9 ಸ್ಥಾನಗಳನ್ನು, ಜನತಾದಳ ಸಂಯುಕ್ತ 19 ಸ್ಥಾನಗಳನ್ನು ಗಳಿಸಿದೆ. ಇವರು ಒಗ್ಗಟ್ಟಿನಿಂದ ಉಳಿದ್ದಿದ್ದರೆ ಇನ್ನೆಷ್ಟು ಸ್ಥಾನಗಳನ್ನು ಪಡೆಯಬಹುದಿತ್ತು ಮತ್ತು ಅದರ ಫಲವಾಗಿ ಬಿಜೆಪಿ ಹಾಗೂ ಕಾಂಗ್ರೆಸ್‌ನ ಸ್ಥಾನಗಳು ಎಷ್ಟು ಕಡಿಮೆಯಾಗುತ್ತಿದ್ದವು ಎಂಬುದು ಚಿಂತಿಸಬೇಕಾದ ವಿಚಾರ. ಕಾಂಗ್ರೆಸ್ ವಿರೋಧಿ ಜಾತ್ಯಾತೀತ ಪರ್ಯಾಯ ಶಕ್ತಿಯ ಕಡೆಗೆ ಒಲವು ತೋರಿಸಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಜನತಾದಳ (ಜಾತ್ಯಾತೀತ) ಪಕ್ಷ ಇತರ ಕಾಂಗ್ರೆಸ್- ಬಿಜೆಪಿ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸಿಕೊಂಡು ಸಾಮೂಹಿಕ ಚಳುವಳಿಯನ್ನು ಕಟ್ಟುವುದು ಆ ಮೂಲಕ ಕಾಂಗ್ರೆಸ್ ನ ನೀತಿಗಳಿಂದ, ರಾಜ್ಯ ಸರ್ಕಾರದ ಆಡಳಿತದಿಂದ ದೂರವಾಗುವ ಜನತೆ ಬಿಜೆಪಿ ಕೂಟದತ್ತ ಸಾಗುವ ಅನಿವಾರ್ಯತೆಯನ್ನು ತಪ್ಪಿಸುವುದು ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲರ ಕರ್ತವ್ಯ.

ಇಂತಹ ಬೆಳವಣಿಗೆಯಲ್ಲಿ ಎಡಪಕ್ಷಗಳು, ಸಾಮೂಹಿಕ ಸಂಘಟನೆಗಳ ಪಾತ್ರ ಹೊಸ ಆರ್ಥಿಕ ನೀತಿಯನ್ನು, ಕೋಮುವಾದವನ್ನು ವಿರೋಧಿಸುವವ ರೆಲ್ಲರ ಪಾತ್ರ ಬಹಳ ಪ್ರಮುಖವಾದದ್ದು.

□□□

ಬಳ್ಳಾರಿಯಲ್ಲಿ ಕೋಮುವಾದಿಗಳ ಮಹಾಸೋಲು

ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ 'ಸ್ವದೇಶಿ' ಬ್ರಾಂಡಿನ ನಾಯಕಿ 'ಕನ್ನಡತಿ' ಸುಷ್ಮಾಸ್ವರಾಜ್ ಸೋತಿದ್ದಾಳೆ. ವಿಜಯೋತ್ಸವ ಆಚರಿಸಲೆಂದೇ ದೆಹಲಿಯಿಂದ ಹಾರಿಬಂದ ಆಕೆಯನ್ನು ಬಳ್ಳಾರಿ ಜನರು ಕ್ಷೇತ್ರದಿಂದ ಹೊರದೂಡಿದ್ದಾರೆ. ಕೊಚ್ಚಿಕೊಂಡ ಬಡಾಯಿಗಳೆಲ್ಲಾ ಬದಲಾಗಿ ಮುಖ ಭಂಗಕ್ಕೆ ಒಳಗಾಗಿದ್ದಾಳೆ. ಇದು ಕೇವಲ ಸುಷ್ಮ ಅಥವಾ ಆಕೆ ವಿಹರಿಸುತ್ತಿರುವ ಬಿಜೆಪಿ ಪಕ್ಷಕ್ಕೆ ಮಾತ್ರವಲ್ಲ, ಅದರ ಕೋಮುವಾದಿ, ರಾಜಕೀಯದ ಸೋಲು.

ಸೋನಿಯಾಗಾಂಧಿ 'ವಿದೇಶಿ' ಎನ್ನುವುದರಿಂದ ಆರಂಭಿಸಿದ ಸಾವಿರಾರುಗಟ್ಟಲೆ ಆರ್.ಎಸ್.ಎಸ್. ಗಣ ಹಾಗೂ ಬಿಜೆಪಿ-ಸಂಯುಕ್ತ ಜನತಾದಳ ಮಹಾನಾಯಕರು ಇಚ್ಛಾನುಸಾರ ಜನರ ನಡುವೆ ಕೀಳುಮಟ್ಟದ ಪ್ರಚಾರ ನಡೆಸಿದರು. 'ಕಿವಿ' 'ಬಾಯಿಗಳಲ್ಲಿ' ವಿಷದ ಗಾಳಿ ಊದಿದರು. ಖಾಕಿ ಚಡ್ಡಿಗಳು, ಮಾತೆ ಮಹಾದೇವಿಯಂತಹ ಸನ್ಯಾಸಿವೇಷದ ಖಾವೀ ಪಡೆಗಳು, ಅರುಣ್‌ಶೌರಿಯಂತಹ ಖಾವೀ ಕಣ್ಣಿನ ಬುದ್ಧಿಜೀವಿಗಳು, ಪ್ರಧಾನಿ ವಾಜಪೇಯಿವಾದಿಯಾಗಿ ಹಿರಿ-ಕಿರಿನಾಯಕರೂ, ಬಂದು ಪರೇಡ್ ಮಾಡಿತು. ಕೇಂದ್ರ ಸರ್ಕಾರ, ಪಟೇಲರ ರಾಜ್ಯಸರ್ಕಾರದ ಯಂತ್ರದ ದುರ್ಬಳಕೆ, ಯಥೇಚ್ಛ ಕಪ್ಪುಹಣ - ಹೆಂಡದ ಹೊಳೆ ಹರಿಸಿದರೂ ಬಳ್ಳಾರಿ ಮತದಾರರು ಅವನ್ನೆಲ್ಲಾ ತಿರಸ್ಕರಿಸಿ ಬಿಜೆಪಿಯನ್ನು ಧೂಳೀಪಟ ಮಾಡಿ ಖೋಟಾ ಸ್ವದೇಶಿಗಳನ್ನು 'ಪರದೇಶಿ' ಗಳನ್ನಾಗಿಸಿದ್ದಾರೆ. ಕೋಮುವಾಧಿ ವಿಷಕ್ಕೆ ಬಲಿಯಾಗುವುದಿಲ್ಲ ಎಂದು ತೋರಿಸಿದ್ದಾರೆ. ಇದು ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿಯೂ ಪ್ರತಿಧ್ವನಿಸಿದೆ. ಇದು ಮತನಿರಪೇಕ್ಷಿತ ಶಕ್ತಿಗಳ ವಿಜಯ.

ಈಗ ಎಲ್ಲವೂ ಮುಗಿದಂತೇನೋ ಕಾಣಿಸುತ್ತಿದೆ. ಆದರೆ ನಿಜವಾಗಿಯೂ ಮುಗಿದಿಲ್ಲ. ಈಗಲೂ ಬಣ್ಣಬಣ್ಣದ ಬಂಟಿಂಗ್ಸ್, ಪೋಸ್ಟರ್ ಗಳೂ ಚೆಲ್ಲಾಪಿಲ್ಲಿ ಕರಪತ್ರಗಳು ಉದ್ದುದ್ದ ಕಟೌಟ್‌ಗಳು ರಾರಾಜಿಸುತ್ತಿವೆ. ಇವುಗಳನ್ನು ಬಳಿದು ಹಾಕುವ ಜೊತೆಗೆ ಜನರ ಮನಸ್ಸಿನೊಳಗೆ ತುಂಬಿರುವ ಕೋಮುವಾದದ ವಿಷದ ಕೊಳೆ ತೊಳೆಯಬೇಕಿದೆ ತೊಲಗಿಸಬೇಕಿದೆ. ಇಂತಹುಗಳನ್ನು ಹಳ್ಳಿ ಹಳ್ಳಿಗೂ ಹೊತ್ತೊಯ್ದು ಸಂಯುಕ್ತ ಜನತಾದಳ ನಾಯಕರು ಮತ್ತೆ ಮತ್ತೆ ಕಾಣಿಸಿಕೊಳ್ಳಲಿದ್ದಾರೆ. ಇವರನ್ನೆಲ್ಲಾ ಹೆಜ್ಜೆಹೆಜ್ಜೆಗೂ ಉತ್ತರಿಸಿ ಎದುರಿಸಿ ಜನ-ಮನಗಳನ್ನು ಶುಚಿಗೊಳಿಸಬೇಕಿದೆ.

ದಿಲ್ಲಿಯಲ್ಲಿಯೂ, ಬಳ್ಳಾರಿಯಲ್ಲಿಯೂ ಜನರಿಂದ ನಿರಾಕರಿಸಲ್ಪಟ್ಟ ಸುಷ್ಮಾಗೆ ವಾಜಪೇಯಿಯವರು ಬಹುಮಾನವಾಗಿ ಕೇಂದ್ರ ಸರ್ಕಾರದಲ್ಲಿ ಕ್ಯಾಬಿನೆಟ್ ಮಂತ್ರಿ ಸ್ಥಾನ ದಯಪಾಲಿಸುವರು ಎಂಬ ಸುದ್ಧಿ ಇದೆ. ನಿಜವೇ?

□□□

ಕರ್ನಾಟಕ ಲೋಕಸಭೆ

	1999	1998
ಒಟ್ಟು ಸ್ಥಾನಗಳು	28	
ಕಾಂಗ್ರೆಸ್	18	9
ಬಿಜೆಪಿ	7	13
ಸಂಯುಕ್ತ ಜನತಾದಳ } ಜನತಾದಳ(ಎಸ್.)	3	3
ಲೋಕಶಕ್ತಿ	0	3

ಕರ್ನಾಟಕ ವಿಧಾನಸಭೆ

	1999	1994
ಒಟ್ಟು ಸ್ಥಾನಗಳು	224	
ಕಾಂಗ್ರೆಸ್,	132	35
ಕೆ.ಸಿ.ಪಿ.		10
ಬಿಜೆಪಿ	44	40
ಸಂಯುಕ್ತ ಜನತಾದಳ	19	116
ಜನತಾದಳ (ಎಸ್)	9	
ಎಐಎಡಿಎಂಕೆ	1	1
ಸಿಪಿಐ(ಎಂ)	0	1
ರಾಜ್ಯ ರೈತಸಂಘ	0	1
ಪಕ್ಷೇತರರು ಮತ್ತು ಇತರರು	19	9





ಕರ್ನಾಟಕದ ಚುನಾವಣೆಯಲ್ಲಿ ಸಿಪಿಐ(ಎಂ)

1999 ರ ಚುನಾವಣೆಗಳಲ್ಲಿ ಸಿಪಿಐ(ಎಂ) 11 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಈ ಸ್ಥಾನಗಳಲ್ಲಿ ಹಿಂದೆ ಗೆದ್ದಿದ್ದ ಸ್ಥಾನವನ್ನು ಉಳಿಸಿಕೊಳ್ಳುವ ಮತ್ತೆ ಒಂದೆರಡನ್ನು ಪಡೆದುಕೊಳ್ಳುವ ಗುರಿಯೊಂದಿಗೆ ಚುನಾವಣಾ ಕಣಕ್ಕಿಳಿದಿತ್ತು. ಫಲಿತಾಂಶಗಳು ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಸಿಪಿಐ(ಎಂ) ಸ್ಪರ್ಧಿಸಿದ ಕ್ಷೇತ್ರಗಳ ಬಗ್ಗೆ ಮತಗಳಿಕೆ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಈ ಕ್ಷೇತ್ರಗಳಲ್ಲಿ 1994ರ ಚುನಾವಣೆಗಳಲ್ಲಿ ಗೆಲವು ಸಾಧಿಸಿದ್ದ ಬಾಗೇಪಲ್ಲಿ ಕ್ಷೇತ್ರದಲ್ಲಿ ಚುನಾವಣಾ ಪ್ರಕ್ರಿಯೆಯ ಆರಂಭದಲ್ಲಿಯೇ ಪಟ್ಟ ಭದ್ರಹಿತಾಸಕ್ತಿಗಳು ಸಿಪಿಐ(ಎಂ) ಗೆಲುವನ್ನು ತಡೆಯಲು ತೀವ್ರ ಪ್ರಯತ್ನ ಆರಂಭಿಸಿದವು. ಇದು ಇಡೀ ಚುನಾವಣಾ ಪ್ರಕ್ರಿಯೆಯನ್ನೇ ಮುಂದೂಡಿ ಗೊಂದಲಕ್ಕೀಡು ಮಾಡಿತು ಎಂಬುದು ಇಂದು ಎಲ್ಲರಿಗೂ ತಿಳಿದ ವಿಷಯ.

ಮೊದಲ ಹಂತದ ಚುನಾವಣೆಗಳ ಸಂದರ್ಭದಲ್ಲಿ ನಾಮಪತ್ರ ಸಲ್ಲಿಸುವಾಗಲೇ ಹತ್ತು ಸಾವಿರಕ್ಕಿಂತಲೂ ಹೆಚ್ಚು ಜನ ಶಿಸ್ತಿನಿಂದ ಮೆರವಣಿಗೆಯಲ್ಲಿ ಸಾಗಿದ್ದನ್ನು ಹಾಗೂ ಸಿಪಿಐ(ಎಂ) ಬಾಗೇಪಲ್ಲಿ ಕ್ಷೇತ್ರವನ್ನು ಮತ್ತೆ ಗೆಲ್ಲುತ್ತದೆ ಎಂಬ ವಾತಾವರಣ ಉಂಟಾಗಿರುವುದನ್ನು ನೋಡಿ ಇನ್ನು ಬಾಗೇಪಲ್ಲಿ ಕ್ಷೇತ್ರದಲ್ಲಿ ನಮ್ಮ ದಬ್ಬಾಳಿಕೆ ನಡೆಯುವುದಿಲ್ಲ ಎಂದು ಮನಗಂಡ ಪಟ್ಟ ಭದ್ರ ಹಿತಾಸಕ್ತಿಗಳು ಒಟ್ಟು ಗೂಡಿದವು. ಜಾತೀವಾದ ಇಡೀ ಕ್ಷೇತ್ರದಲ್ಲಿ ರಿಂಗಣಗುಣಿಯಿತು.

ಹಣ, ಹೆಂಡದ ಹೊಳೆಯೇ ಹರಿಯಿತು. ಮತದಾನ ಶೇ. 80 ರಷ್ಟು ಹೆಚ್ಚಾಯಿತು. ಈ ಪ್ರಮಾಣದ ಮತದಾನ ಹೆಚ್ಚಾಗಲು ಅನೇಕ ಕಡೆ ಅಕ್ರಮಗಳೂ ನಡೆದಿವೆ ಎಂಬ ವರದಿಯಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ಮತ 1994 ಕ್ಕಿಂತ ಸ್ವಲ್ಪ ಹೆಚ್ಚಾದರೂ ಕೂಡ ಸೋಲನ್ನು ಅನುಭವಿಸಬೇಕಾಯಿತು. ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಂಪಂಗಿ ಗೆದ್ದಿದ್ದಾರೆ.

ಕಮಲಾಪುರ

ಕಮಲಾಪುರ ಗುಲ್ಬರ್ಗ ಜಿಲ್ಲೆಯಲ್ಲಿರುವ ನಿಜಾಂ ಸಂಸ್ಥಾನದ ಭಾಗವಾಗಿರುವ ಕ್ಷೇತ್ರ ಅಲ್ಲಿ ಪಾಳೆಯಗಾರಿ ವ್ಯವಸ್ಥೆ ರಾಜ್ಯದ ಇತರ ಪ್ರದೇಶಗಳಿಗಿಂತ ಪ್ರಬಲವಾಗಿಯೇ ಉಳಿದು ಕೃಷಿಕೂಲಿಕಾರರು ರೈತರು ಪಾಳೆಯಗಾರಿ ಧಣಿಗಳ ದರ್ಪ, ದಬ್ಬಾಳಿಕೆಗಳಿಗೆ ನಿರಂತರವಾಗಿ ತುತ್ತಾಗಿರುವ ಪ್ರದೇಶ. ವರ್ಗ ಸಂಘರ್ಷದಿಂದ ಈ ಕ್ಷೇತ್ರದ ಕೆಲವು ಪ್ರದೇಶಗಳಲ್ಲಿ ಈ ದರ್ಪ ದಬ್ಬಾಳಿಕೆಗಳನ್ನು ತೊಡೆದು ಹಾಕಲು ಸಾಧ್ಯವಾಗಿದೆ ಹಾಗೂ ಪಕ್ಷಕ್ಕೆ ಒಂದು ನೆಲೆಯನ್ನು ಪಡೆಯಲು ಸಾಧ್ಯವಾಗಿದೆ.

ಈ ಅನುಭವವನ್ನು ಕಂಡುಂಡ ಪಾಳೆಯಗಾರಿ ದಣಿಗಳಿಗೆ ಸಿಪಿಐ(ಎಂ) ಅಲ್ಲಿನ ಶಾಸಕ ಸ್ಥಾನವನ್ನು ಗೆದ್ದರೆ ತಮಗೆ ಉಳಿಗಾಲವಿಲ್ಲವೆಂದು ಭಾವಿಸಿ ಪಕ್ಷದ ಬೆಳವಣಿಗೆಯನ್ನು ತಡೆಯಲು ಒಂದು ಗೂಡಿದರು. ಸಿಪಿಐ(ಎಂ) ಆರಿಸಿ ಬಂದರೆ ಮತ್ತೆ ಈ ಕ್ಷೇತ್ರವನ್ನು ಯಾರಿಗೂ ಬಿಡುವುದಿಲ್ಲ. ಈಗ ಮೀಸಲು ಕ್ಷೇತ್ರವಾಗಿರುವ ಕಮಲಾಪುರ ಮುಂದೆ ಸಾಮಾನ್ಯ ಕ್ಷೇತ್ರವಾಗಿ ಪರಿವರ್ತಿತವಾದರೆ ಬೇರೆ ಯಾವುದೇ ಪಕ್ಷಗೆದ್ದರೂ ಆಗ ಪಾಳೆಯಗಾರಿ ಧಣಿಗಳೇ ಗೆಲ್ಲುವ ಅವಕಾಶವಿರುತ್ತದೆ. ಸಿಪಿಐ(ಎಂ) ಗೆ ಕ್ಷೇತ್ರದಕ್ಕಿದರೆ ಎಂದೆಂದೂ ಈ ಧಣಿಗಳಿಗೆ ಅವಕಾಶ ಸಿಗುವುದಿಲ್ಲ. ಜೊತೆಗೆ ಸಿಪಿಐ(ಎಂ) ಗೆದ್ದರೆ ಕೂಲಿಕಾರರಿಗೆ ಹೆಚ್ಚು ಕೂಲಿ, ನಿಗದಿತ ಸಮಯದ ಮಿತಿಗಳನ್ನು ಒತ್ತಾಯಿಸುತ್ತಾರೆ. ಅವರ ಮೇಲೆ ದಬ್ಬಾಳಿಕೆ, ಶೋಷಣೆಗಳನ್ನು ನಡೆಸಲು ಸಾಧ್ಯವಾಗುವುದಿಲ್ಲವೆಂಬ ಭಯದಿಂದ ಈ ಪಾಳೆಯಗಾರಿ ಪಟ್ಟಭದ್ರರು, ಹೆಚ್ಚಿನ ಪ್ರಜ್ಞೆ ವಿದ್ಯಾಭ್ಯಾಸವಿಲ್ಲದ ಬಿಜೆಪಿ ಅಭ್ಯರ್ಥಿಯೇ ತಮ್ಮ ಕೈ ಗೊಂಬೆಯಾಗಿರಲು ಯೋಗ್ಯ ಎಂದು ಬಾವಿಸಿ ಅವರನ್ನು ಗೆಲ್ಲಿಸಲು ಶ್ರಮಿಸಿದರು. ಜಾತಿವಾದಿ ಗುಪ್ತ ಸಭೆಗಳನ್ನು ನಡೆಸಿದರು. ಅದರ ಫಲವಾಗಿ ಬಿಜೆಪಿ ಅಭ್ಯರ್ಥಿ ಅಲ್ಲಿ ಗೆಲ್ಲುವಂತಾಯಿತು. ಜೊತೆಗೆ ನಿರಂತರ ಸಾಮೂಹಿಕ ಹೋರಾಟಗಳಿಂದ ಕಮಲಾಪುರ ಪ್ರಾಂತ ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಯುವ ಸಂಘಟನೆಗಳ ಪ್ರಭಾವ ಬೆಳೆದರೂ ಕೂಡ ಅದನ್ನು ರಾಜಕೀಯಗೊಳಿಸಲು ಅಂದರೆ ಅವರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸಲು ಪೂರ್ಣವಾಗಿ ಸಾಧ್ಯವಾಗಲಿಲ್ಲವೆಂಬುದು ಕೂಡ ಫಲಿತಾಂಶದಿಂದ ಸ್ಪಷ್ಟವಾಗಿದೆ.

ಉಲ್ಲಾಳ

ಕರ್ನಾಟಕದ ಕರಾವಳಿ ಭಾಗದಲ್ಲಿ ಬಿಜೆಪಿ ಪ್ರಬಲವಾಗಿ ಬೆಳೆದು ನಿರಂತರವಾಗಿ ಕೋಮುಗಲಭೆಗಳನ್ನು ಪ್ರೋತ್ಸಾಹಿಸುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿ ಜನ ಸಾಮಾನ್ಯರ ಮಧ್ಯೆ ಬಿಜೆಪಿಯನ್ನು ಹೇಗಾದರೂ ಮಾಡಿ ಸೋಲಿಸಬೇಕೆನ್ನುವ ತೀವ್ರ ಭಾವನೆ ಬೆಳೆದಿತ್ತು. ಇದು ಇಂದು ಕರಾವಳಿ ಪ್ರದೇಶದ ಇತರ ಫಲಿತಾಂಶಗಳಲ್ಲಿಯೂ ವ್ಯಕ್ತವಾಗುತ್ತದೆ. ಹಾಗೇ ಆ ಪ್ರದೇಶದಲ್ಲಿ ಬಿ.ಜೆ.ಪಿ- ಕಾಂಗ್ರೆ ಬಿಟ್ಟು ತೃತೀಯ ಶಕ್ತಿ ದುರ್ಬಲ.

ಇಂತಹ ಸಂದರ್ಭದಲ್ಲಿ ಉಲ್ಲಾಳದಲ್ಲಿ ಹಿಂದೆಗೆದ್ದಿದ್ದ ಬಿಜೆಪಿ ಅಭ್ಯರ್ಥಿ ಸೋತು ಕಾಂಗ್ರೆಸ್ ಗೆದ್ದಿದೆ. ಈ ಹಣಾಹಣಿಯಲ್ಲಿ ಸಿಪಿಐ(ಎಂ) ಗೆ ಸೋಲುಂಟಾಗಿದೆ.

ಇನ್ನು ಇತರ ಕ್ಷೇತ್ರಗಳಲ್ಲಿ ಅಲ್ಲಿ ನಡೆದಿರುವ ಸಾಮೂಹಿಕ ಹೋರಾಟಗಳಲ್ಲಿ ಭಾಗವಹಿಸಿ ಜನಸಮುದಾಯವನ್ನೆ ರಾಜಕೀಯಗೊಳಿಸಲು ಪಕ್ಷದ ಸಂಪರ್ಕವನ್ನು ವಿಸ್ತರಿಸಿ ಆ ಮೂಲಕ ಇನ್ನೂ ದೊಡ್ಡ ಚಳುವಳಿಗಳನ್ನು ಬೆಳೆಸುವುದೇ ಮುಖ್ಯಗುರಿಯಾಗಿ ಸ್ಪರ್ಧಿಸಲಾಗಿತ್ತು. ಈ ಕ್ಷೇತ್ರಗಳಲ್ಲಿ ಪಕ್ಷ ಮತ್ತೆ ಸ್ಪರ್ಧಿಸಿದ ವರ್ತೂರು, ಹಾಗೂ ಹೊಸದಾಗಿ ಸ್ಪರ್ಧಿಸಿದ ದೇವದುರ್ಗ, ಹೊಸಪೇಟೆಗಳಲ್ಲಿ ಗಮನಾರ್ಹ ಮತಗಳನ್ನು ಗಳಿಸಿದೆ.

ಸ್ಪರ್ಧಿಸಿದ ಎಲ್ಲಾ ಕ್ಷೇತ್ರಗಳಲ್ಲೂ ಆಳವಾದ ವಿಮರ್ಶೆ ನಡೆಸಿ ಚಳುವಳಿಯನ್ನು ಮುಂದೆ ಕೊಂಡೊಯ್ಯಲು ಈ ಚುನಾವಣಾ ಸ್ಪರ್ಧೆಯನ್ನು ಒಂದು ಆಧಾರವಾಗಿ ಬಳಸಿಕೊಳ್ಳಬೇಕಾಗಿದೆ.

ಬಾಗೇಪಲ್ಲಿ

	1999		1994
ಒಟ್ಟು ಮತಗಳು	1,41330	ಚಲಾಯಿಸಿದ ಮತಗಳು	91777
ಎನ್.ಸಂಪಂಗಿ (ಪಕ್ಷೇತರ)	40183	ಜಿ.ವಿ.ಶ್ರೀರಾಮರೆಡ್ಡಿ(ಸಿಪಿಐ(ಎಂ)	35851
ಜಿ.ವಿ.ಶ್ರೀರಾಮರೆಡ್ಡಿ ಸಿಪಿಐ(ಎಂ)	36884	ಪಿ.ಎನ್. ಪದ್ಮನಾಭರಾವ್(ಕಾಂಗ್ರೆಸ್)	29405
ಡಿ.ಜೆ.ನಾಗರ್ಾಜರೆಡ್ಡಿ. ಕಾಂಗ್ರೆಸ್	24134	ಬಿ. ನಾರಾಯಣಪ್ಪ(ಜನತಾದಳ)	17616
ಜಿ.ಕೆ.ರೆಡ್ಡಿ ದಳ(ಯು)	3488	ಬಿ.ಆರ್. ನರಸಿಂಹ ನಾಯ್ಡು (ಕೆ.ಸಿ.ಪಿ.)	2581

ಕೆ.ಜಿ.ಎಫ್

	1999		1994
ಚಲಾಯಿಸಿದ ಮತಗಳು	63000	ಚಲಾಯಿಸಿದ ಮತಗಳು	64629
ಎ.ಐ.ಡಿ.ಎಂ.ಕೆ.	22192	ಆರ್.ಪಿ.ಐ	27271
ಬಿ.ಜೆ.ಪಿ	18380	ಎ.ಐ.ಡಿ.ಎಂ.ಕೆ	17868
ಆರ್.ಪಿ.ಐ	15461	ಸಿಪಿಐ(ಎಂ)	5749
ಸಿಪಿಐ(ಎಂ)	2703	ಕೆ.ಸಿ.ಪಿ	4573
		ಬಿ.ಜೆ.ಪಿ	4375
		ಕಾಂಗ್ರೆಸ್(ಐ)	2075
		ಜನತಾ ದಳ	999

ಚಿಂತಾಮಣಿ

	1999		1994
ಚೌಡರೆಡ್ಡಿ (ಪಕ್ಷೇತರ)	58977	ಜನತಾದಳ	52293
ಕೃಷ್ಣರೆಡ್ಡಿ ಜೆ.ಡಿ.(ಯು)	53315	ಕಾಂಗ್ರೆಸ್ (ಐ)	451395
ಅಶ್ವಥನಾರಾಯಣ ರೆಡ್ಡಿ. ಸಿಪಿಐ(ಎಂ)	2224	ಬಿ.ಎಸ್.ಪಿ	143
		ಬಿ.ಜೆ.ಪಿ	1293
		ಕೆ.ಸಿ.ಪಿ	1188
		ಸಿಪಿಐ(ಎಂ)	1052

ಉಲ್ಲಾಳ

	1999		1994
ಒಟ್ಟು ಮತಗಳು	1,34020	ಒಟ್ಟು ಮತಗಳು	1,20071
ಚಲಾಯಿಸಿದ ಮತಗಳು	96655	ಚಲಾಯಿಸಿದಮತಗಳು	76529
ತಿರಸ್ಕೃತ ಮತಗಳು	1681	ಬಿ.ಜೆ.ಪಿ.	24412
ಯು.ಟಿ. ಫರೀದ್ (ಕಾಂಗ್ರೆಸ್)	50098	ಕಾಂಗ್ರೆಸ್ (ಐ)	18817
ಕೆ. ಜಯರಾಮ ಶೆಟ್ಟಿ	34140	ಸಿಪಿಐ(ಎಂ)	13154
ಬಿ.ಮಾಧವ ಸಿಪಿಐ(ಎಂ)	8136		

ಕಮಲಾಪುರ

	1999		1994
ಬಿಜೆಪಿ	27531	ಒಟ್ಟು ಮತಗಳು	1,20300
ಕಾಂಗ್ರೆಸ್ ಐ	18981	ಚಲಾಯಿಸಿದ ಮತಗಳು	67359
ಸಿಪಿಐ(ಎಂ)	14043	ಬಿ.ಜೆ.ಪಿ	19389
ಜೆಡಿಎಸ್	6231	ಕಾಂಗ್ರೆಸ್ (ಐ)	13013
ಬಿಎಸ್.ಪಿ	1302	ಜನತಾ ದಳ	13009
ಎಸ್.ಪಿ.	931	ಸಿಪಿಐ(ಎಂ)	12881
ಐ.ಎನ್.ಡಿ.	391	ಕೆ.ಸಿ.ಪಿ	3392
ಇತರರು	35410		

ದೇವದುರ್ಗ

ಒಟ್ಟು ಮತಗಳು	131259
ಚಲಾಯಿಸಿದ ಮತಗಳು	73675
ತಿರಸ್ಕೃತ ಮತಗಳು	4464
ಗಂಗಪ್ಪ (ಕಾಂಗ್ರೆಸ್) ಆಯ್ಕೆಯಾಗಿದ್ದಾರೆ	37973
ಶಿವಲಿಂಗಸ್ವಾಮಿ. ಜೆ.ಡಿ.(ಯು)	14602
ಆರ್. ತಿಮ್ಮಮ್ಮ (ಬಿ.ಜೆ.ಪಿ)	9112
ಚಂದ್ರಪ್ಪ ಹೊಸ್ಕೇರ ಸಿಪಿಐ (ಎಂ)	5519

ಹೊಸಪೇಟೆ

ಕಾಂಗ್ರೆಸ್	42000
ಬಿ.ಜೆ.ಪಿ	32000
ಸಿಪಿಐ(ಎಂ)	4100

ಶಿಡ್ಲಘಟ್ಟ

ಒಟ್ಟು ಮತಗಳು	141730
ಚಲಾಯಿಸಿದ ಮತಗಳು	12443
ತಿರಸ್ಕೃತ ಮತಗಳು	2763
ವಿ. ಮುನಿಯಪ್ಪ (ಕಾಂಗ್ರೆಸ್)	60512
ಎಸ್. ಮುನಿಸ್ವಾಮಪ್ಪ ದಳ(ಎಸ್)	48044
ಕೆ.ಎಂ. ವೆಂಕಟೇಶ್ ಸಿಪಿಐ(ಎಂ)	2099

ಹಾನಗಲ್

ಒಟ್ಟು ಮತಗಳು	1,10,100
ತಿರಸ್ಕೃತ ಮತಗಳು	2516
ಮನೋಹರ ತಹಸಿಲ್ದಾರ್ (ಕಾಂಗ್ರೆಸ್)	59181
ಸಿ.ಎಂ. ಉದಾಸಿ ಜೆ.ಡಿ(ಯು)	43961
ಎಫ್.ಹೋತಾನಹಳ್ಳಿ ಸಿಪಿಐ(ಎಂ)	2390

ವರ್ತೂರು

ಕಾಂಗ್ರೆಸ್ (ಐ)	109058
ಜೆಡಿ(ಯು)	82795
ಸಿಪಿಐ(ಎಂ)	6912
ಜೆಡಿ(ಎಸ್)	7105

ದೊಡ್ಡಬಳ್ಳಾಪುರ

ಒಟ್ಟು ಮತಗಳು	166438
ಚಲಾಯಿಸಿದ ಮತಗಳು	191193
ತಿರಸ್ಕೃತ ಮತಗಳು	6807
ವಿ.ಕೃಷ್ಣಪ್ಪ (ಬಿ.ಜೆ.ಪಿ) ಆಯ್ಕೆಯಾಗಿದ್ದಾರೆ	62096
ಆರ್.ಜಿ.ವೆಂಕಟಚಲಯ್ಯ (ಕಾಂಗ್ರೆಸ್)	47966
ಆರ್.ಚಂದ್ರ ತೇಜಸ್ವಿ (ಸಿ.ಪಿ.ಎಂ)	2324

ಕೇಂದ್ರ-ಮತ್ತೆ ಅಸ್ಥಿರತೆಯತ್ತ

ಹರ್ಕಿಷನ್ ಸಿಂಗ್ ಸುರ್ಜಿತ್

ಕುತೂಹಲ ಕೊನೆಗೊಂಡಿದೆ. 13ನೇ ಲೋಕಸಭಾ ಚುನಾವಣಾ ಫಲಿತಾಂಶಗಳು ಪ್ರಕಟವಾಗಿವೆ. ಹಲವರ ನಿರೀಕ್ಷೆ, ಊಹೆಗಳು ತಲೆಕೆಳಗಾಗಿವೆ. ಈ ವೈವಿಧ್ಯಮಯ ಭಾರತ ಹೀಗೆ ಉಳಿಯುವುದೇ? ಮತ್ತೇ ಕೋಮುವಾದಿ ಶಕ್ತಿಗಳು ಅಧಿಕಾರದ ಗದ್ದುಗೆಗೆ ಏರಲಿವೆಯೇ? ಹೀಗೆ ಹಲವು ಪ್ರಶ್ನೆಗಳು ಮತದಾರರ ಮುಂದಿದ್ದವು.

ಈಗೇನೋ ಬಿಜೆಪಿ-ಮಿತ್ರಕೂಟವನ್ನು ಸರ್ಕಾರ ರಚಿಸಲು ಆಹ್ವಾನಿಸಲಾಗುತ್ತಿದೆ. ಆದರೆ ಪೂರ್ಣ ಬಹುಮತ ಇನ್ನೂ ಪಡೆಯಬೇಕಿದೆ. ಬಿಜೆಪಿ ಮತ್ತೇ ಅಧಿಕಾರ ಪಡೆಯಬೇಕೆಂಬುದು ಅಮೆರಿಕಾದ ಪ್ರಬಲ ಇಚ್ಛೆಯಾಗಿತ್ತು. ಬಾಯಲ್ಲಿ ಸ್ವದೇಶಿ ಮಂತ್ರ ಹೇಳುತ್ತಾ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದ ಸಂಪತ್ತನ್ನು ಧಾರೆ ಎರೆದ ಬಿಜೆಪಿ ಅಮೆರಿಕಾ ಮುಂತಾದ ದೇಶಗಳಿಗೆ ಬಹುಪ್ರಿಯ. ಜಾಗತಿಕ ಅಧಿಪತ್ಯ ಪಡೆಯಲು ಯತ್ನಿಸುತ್ತಿರುವ ಅಮೇರಿಕಾಕ್ಕೆ ಅಡಿಯಾಳಾಗುವ ಭಾರತ ಬೇಕಿದೆ.

ಸದ್ಯದ ನಮ್ಮ ಚುನಾವಣಾ ಪದ್ಧತಿಯಂತೆ ಅಧಿಕಾರಕ್ಕೆ ಬರಲು ಅತ್ಯಧಿಕ ಶೇಕಡವಾರು ಮತಗಳನ್ನು ಪಡೆಯಬೇಕಿಲ್ಲ. ಸೀಟುಗಳನ್ನು ಪಡೆದರಾಯಿತು. ಹೀಗಾಗಿ ಜನತೆಯ ಬಹುಮತದ ತೀರ್ಪು ಇಲ್ಲದಿದ್ದರೂ ಅಧಿಕಾರಕ್ಕೆ ಏರಬಹುದು. ಆದ್ದರಿಂದ ಎಡಪಕ್ಷಗಳು ಚುನಾವಣಾ ಪದ್ಧತಿಯಲ್ಲಿ 'ಪ್ರಾತಿನಿಧ್ಯ ಪದ್ಧತಿ' ತರಲು ಒತ್ತಾಯಿಸಿದರೂ, ಬಂಡವಾಳಶಾಹಿ-ಭೂಮಾಲಕರ ಪಕ್ಷಗಳಿಗೆ ಇದು ಬೇಕಿಲ್ಲ.

ಈ ಚುನಾವಣೆಯಲ್ಲಿ ಸರ್ಕಾರದ ಟಿ.ವಿ. ಮತ್ತು ಖಾಸಗಿ ಚಾನೆಲ್ ಟಿ.ವಿ., ದೊಡ್ಡ ಪತ್ರಿಕೆಗಳನ್ನು, ಆಳುವ ಬಿಜೆಪಿ ಮನಬಂದಂತೆ ಬಳಸಿತು. ಜಾಹೀರಾತುಗಳಿಗೆ ನೂರಾರು ಕೋಟಿ ಹಣ ಹರಿಸಿತು. ಅನೇಕ ಪಕ್ಷಗಳೊಂದಿಗೆ ಅಪವಿತ್ರವಾದ ಮೈತ್ರಿ ಏರ್ಪಟ್ಟಿತು. ಇದಕ್ಕೆ ಒಂದು ಉದಾಹರಣೆ ಕರ್ನಾಟಕ ಜನತಾದಳ(ಯು)ವಿನೊಂದಿಗೆ ಹೊಂದಾಣಿಕೆ. ಜನ ಇವರನ್ನು ತಿರಸ್ಕರಿಸಿದ ಮೇಲೆ ಒಬ್ಬರು ಇನ್ನೊಬ್ಬರನ್ನು ದೂಷಿಸುತ್ತಾ ರಾಡಿ ಎರಚಿಸಿಕೊಳ್ಳುತ್ತಿದ್ದಾರೆ.

ಈಗಿನ ಫಲಿತಾಂಶಗಳ ಪ್ರಕಾರ ಬಿಜೆಪಿ ಹೇಳಿಕೊಳ್ಳುವಂತಹ ಗೆಲುವನ್ನು ಸಾಧಿಸಿಲ್ಲ. ಹಿಂದಿದ್ದ ಕೆಲವೆಡೆ ಸ್ಥಾನ ಕಳೆದುಕೊಂಡಿದೆ. ಹಲವೆಡೆ ಹೊಸತು ಬಂದಿದೆ. ಆದರೆ ಆದರ ಮಿತ್ರಕೂಟದ ಪಕ್ಷಗಳಾದ ಡಿಎಂಕೆ ಮತ್ತು ತೆಲುಗುದೇಶಂ ಪಕ್ಷಗಳು ತಮ್ಮ ಸ್ಥಾನಗಳನ್ನು ಹೆಚ್ಚಿಸಿಕೊಂಡು ಮೈತ್ರಿಕೂಟಕ್ಕೆ ಬಲ ತಂದಿವೆ. ಇಡೀ ಚುನಾವಣಾ ಪ್ರಚಾರದಲ್ಲಿ ಈ ಎರಡೂ ಪಕ್ಷಗಳೂ ಬಿಜೆಪಿಯಿಂದ ಮತ್ತು ಆದರ ಎನ್‌ಡಿಎ ಪ್ರಣಾಳಿಕೆಯಿಂದ ಭಿನ್ನವಾಗೇ ಗುರುತಿಸಿ ಕೊಂಡವು ಎಂಬುದು ಗಮನಾರ್ಹ. ತೆಲುಗುದೇಶಂ ನ 30 ಮತ್ತು ಡಿಎಂಕೆ ಯ 12 ಸ್ಥಾನಗಳನ್ನು ಹೊರತು ಪಡಿಸಿದರೆ ಬಿಜೆಪಿ ಕೂಟ, ಬಹುಮತದ ಕೊರತೆ ಎದುರಿಸುತ್ತದೆ.

ಪ್ರದೇಶದಿಂದ ಪ್ರದೇಶಕ್ಕೆ ಫಲಿತಾಂಶ ಬೇರೆಯಾಗಿರುವುದು ಈ ಚುನಾವಣಾ ಫಲಿತಾಂಶದ ವಿಶೇಷ. ತಮಿಳುನಾಡಿನಲ್ಲಿ ಡಿಎಂಕೆ ಪರ ಜನತೆ ವಾಲಿದ್ದಾರೆ. ಆಂಧ್ರದಲ್ಲಿ ತೆಲುಗುದೇಶಂ ಲೋಕಸಭೆ ಹಾಗೂ ವಿಧಾನಸಭೆಯಲ್ಲಿಯೂ ತನ್ನ ಸ್ಥಾನಗಳನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದೆ. ಕರ್ನಾಟಕದಲ್ಲಿ ಬಿಜೆಪಿ-ಜನತಾದಳ(ಯು) ದಯನೀಯವಾಗಿ ಸೋತಿವೆ. ಕಾಂಗ್ರೆಸ್ ಸ್ಪಷ್ಟ ಬಹುಮತಪಡೆದಿದೆ. ರಾಜ್ಯದಲ್ಲಿ ಅಧಿಕಾರ ಹಿಡಿದಿದೆ. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಮತ್ತು ಯುಡಿಎಫ್ ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿವೆ. ಉತ್ತರ ಭಾರತದ ಪಂಜಾಬ್‌ನಲ್ಲಿ ಬಿಜೆಪಿ-ಅಕಾಲಿ ಮೈತ್ರಿ ಕೂಟ ಧೂಳಿಪಟವಾಗಿ 13 ರಿಂದ ಕೇವಲ 3 ಕ್ಕೆ ಇಳಿದಿದೆ. ಆದರೆ ದೆಹಲಿ, ಹರ್ಯಾಣ, ಹಿಮಾಚಲದಂತಹ ಸಣ್ಣ ರಾಜ್ಯಗಳ ಫಲಿತಾಂಶ ಬೇರೆಯ ಕಥೆಯನ್ನೇ ಹೇಳುತ್ತಿವೆ. ಇಲ್ಲೆಲ್ಲಾ ಬಿಜೆಪಿ ಕೂಟ ಪೂರ್ಣ ಗೆಲುವು ಪಡೆದಿದೆ. ಕೆಲವೇ ತಿಂಗಳ ಹಿಂದೆ ಬಿಜೆಪಿ ಸೋತು ಕಾಂಗ್ರೆಸ್‌ನ್ನು ಜನತೆ ಅಧಿಕಾರಕ್ಕೆ ತಂದಿದ್ದರು. ತನ್ನ ಜನವಿರೋಧಿ ಆರ್ಥಿಕ ನೀತಿಗಳನ್ನು ಕೈಬಿಡದೆ ಜಾರಿಗೆ ತೊಡಗಿರುವುದು ಮತ್ತು ಕೋಮು ವಾದಿ ಶಕ್ತಿಗಳ ಎದುರು ಸ್ಪಷ್ಟ ಸೈದ್ಧಾಂತಿಕ, ಸಂಘಟನಾತ್ಮಕ ಹೋರಾಟ ನಡೆಸದೇ ಇರುವುದು ಇಂತಹ ಫಲಿತಾಂಶಕ್ಕೆ ಕಾರಣವಾಗಿದೆ. ರಾಜಸ್ಥಾನ ದಲ್ಲಿಯೂ ಇದೇ ರೀತಿ. ಬಿಜೆಪಿಯನ್ನು ಮತದಾರರು ಬೆಂಬಲಿಸಿದ್ದಾರೆ. ಬಿಹಾರ, ಒರಿಸ್ಸಾದಲ್ಲಿ ಅದೇ ಮೈತ್ರಿ ಕೂಟ ಗೆಲುವು ಸಾಧಿಸಿದೆ. ಬಿಜೆಪಿ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದ ಉತ್ತರ ಪ್ರದೇಶದಲ್ಲಿ ಲೆಕ್ಕ ತಲೆಕೆಳ ಕಾಗಿದೆ. 59 ಸ್ಥಾನಗಳಿಂದ 29ಕ್ಕೆ ಬಿಜೆಪಿ ಬಲ ಇಳಿದಿದೆ.

ಹಾಗೆಯೇ ಕರ್ನಾಟಕ, ಪಂಜಾಬ್‌ನಲ್ಲಿ ಉತ್ತಮ ಸಾಧನೆ ಇದ್ದರೂ ಕಾಂಗ್ರೆಸ್ ಬಲವೂ ಸಹ ಮೊದಲಿಗಿಂತಲೂ ಕುಸಿದಿದೆ. ರಾಜಸ್ಥಾನದಲ್ಲಿ ಹಿಂದುಳಿದ ಆಯೋಗದ ವರದಿ ಶಿಫಾರಸು ಜಾರಿ ತರುವುದಾಗಿ ಕೊಟ್ಟ ವಚನ ಪಾಲಿಸದೇ ಜಾಟ್ ಜನಾಂಗ ಕಾಂಗ್ರೆಸ್ ವಿರುದ್ಧ ನಿಂತಿತು. ಹರ್ಯಾಣದಲ್ಲಿ ಹೆಚ್.ವಿ.ಪಿ. ಸರ್ಕಾರವನ್ನು ಇಳಿಸಿದ ನಂತರದಲ್ಲಿ ಅನುಸರಿಸಿದ ತಂತ್ರದಿಂದಾಗಿ ಓಂಪ್ರಕಾಶ ಚೌತಾಲ ಅಧಿಕಾರಕ್ಕೆ ಬರುವಂತೆ ಮಾಡಿದ್ದೂ ಒಂದು ಕಾರಣ. ಒರಿಸ್ಸಾದಲ್ಲಿ ನಾಯಕತ್ವ ಬದಲಾಯಿಸಿದ್ದರೂ, ಅದರ ಲಾಭ ದಕ್ಕಲಿಲ್ಲ. ಬಿಜೆಡಿ-ಬಿಜೆಪಿ ಮೈತ್ರಿಕೂಟ ಮೇಲುಗೈ ಪಡೆದಿದೆ.

ಆದರೆ ಮಹಾರಾಷ್ಟ್ರದಲ್ಲಿನ ಚಿತ್ರಣವೇ ಪೂರ್ಣ ಬೇರೆಯಾಗಿದೆ. ಲೋಕಸಭೆಗೆ ಶಿವಸೇನಾ-ಬಿಜೆಪಿ ಕೂಟ ಹೆಚ್ಚಿನ ಸ್ಥಾನ ಪಡೆದಿವೆ. ಆದರೆ ವಿಧಾನಸಭೆಗೆ ಕಾಂಗ್ರೆಸ್ ಮತು ನ್ಯಾಷನಲ್ ಕಾಂಗ್ರೆಸ್ ಪಾರ್ಟಿಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದರೂ, ಒಟ್ಟು 134 ಸ್ಥಾನಗಳಿಸಿ, ಶಿವಸೇನಾ-ಬಿಜೆಪಿಗಿಂತ 10 ಸ್ಥಾನಗಳಲ್ಲಿ ಮುಂದಿದೆ. ಕಾಂಗ್ರೆಸ್‌ನಲ್ಲಿ ಒಡಕು ಬರದೇ ಅಥವಾ ಇಬ್ಬರೂ ಒಗ್ಗಟ್ಟಾಗಿ ಸ್ಪರ್ಧಿಸಿದ್ದರೆ ಶಿವಸೇನಾ-ಬಿಜೆಪಿ ಕೂಟವನ್ನು ಧೂಳೀಪಟ ಮಾಡಬಹುದಿತ್ತು.

ಬಿಜೆಪಿ-ಮೈತ್ರಿಕೂಟ ಹಾಗೂ ಕಾಂಗ್ರೆಸ್ ಪಕ್ಷಗಳಿಗೆ ಎದುರಾಗಿ ಹೋರಾಡಿದ ಸಿಪಿಐ(ಎಂ) 32 ಸ್ಥಾನ ಪಡೆದು ತನ್ನ ಸ್ಥಿತಿ ಕಾಯ್ದುಕೊಂಡಿದೆ. ಆದರೆ ಎಡಶಕ್ತಿಗಳ ಒಟ್ಟು ಬಲ ಸ್ವಲ್ಪ ಕುಗ್ಗಿದೆ. ತ್ರಿಪುರಾದಲ್ಲಿ ಎರಡೂ ಸ್ಥಾನಗಳನ್ನು ಸಿಪಿಐ(ಎಂ) ಗಳಿಸಿದೆ. ಪ.ಬಂಗಾಳದಲ್ಲಿ ಹಾಲಿ 4 ಸ್ಥಾನ ಕಳೆದು ಕೊಂಡು, ಹೊಸದಾಗಿ 4 ರಲ್ಲಿ ಗೆಲ್ಲಲಾಗಿದೆ. ಆರು ಸ್ಥಾನಗಳಿಂದ ಎಂಟಕ್ಕೆ ಹೆಚ್ಚಿರುವದು ಕೇರಳದಲ್ಲಿ. ತಮಿಳುನಾಡಿನಲ್ಲಿ ಮಧುರೈ ಗೆದ್ದು ಉತ್ತಮ ಸಾಧನೆ ಮಾಡಲಾಗಿದೆ.

ಬಿಜೆಪಿ ನೇತೃತ್ವದ ಮೈತ್ರಿಕೂಟದ ಗೆಲುವ, ಅಸ್ಥಿರತೆಯ ಅವಧಿ ಮುಗಿದಿದೆಯೆಂದೂ, ಸ್ಥಿರತೆ ತಂದಿದೆ ಎಂದೂ ಭಾವಿಸಬೇಕಿಲ್ಲ. ನಿಜವಾಗಿಯೂ ಬಿಜೆಪಿಯು ತನ್ನ ಶಕ್ತಿಯನ್ನು ಅಷ್ಟಾಗಿ ಹೆಚ್ಚಿಸಿ ಕೊಂಡಿಲ್ಲ. ಮೈತ್ರಿಕೂಟದ ಇತರೆ ಪಕ್ಷಗಳು ಶಕ್ತಿ ಹೆಚ್ಚಿಸಿ ಕೊಂಡಿರುವದು ಗಮನಾರ್ಹ ಅಂಶ. ಚುನಾವಣಾ ಪ್ರಚಾರ ಸಂದರ್ಭದಲ್ಲಿಯೇ ಡಿಎಂಕೆ, ಟಿಡಿಪಿ ಪಕ್ಷಗಳು ಬಿಜೆಪಿ-ನೀತಿ, ಕಾರ್ಯಕ್ರಮ ತಮಗೆ ಸಂಬಂಧ ಇಲ್ಲವೆಂದು ಹೇಳಿದವು.

ಈ ಚುನಾವಣೆಗೆ ಮಾತ್ರವೇ ಮೈತ್ರಿ, ಸೀಮಿತ ವಾದುದೆಂದು ಚಂದ್ರಬಾಬು ನಾಯ್ಡು ಹೇಳಿದರು. ಅವರ ಶಕ್ತಿ ಹೆಚ್ಚಿರುವುದರಿಂದ ಕೇಂದ್ರ ಸರ್ಕಾರದಲ್ಲಿ ಹೆಚ್ಚಿನ ಪಾಲು ಪಡೆಯಲು ಚೌಕಾಶಿ ಮಾಡುವ ಶಕ್ತಿ ದೊರೆತಂತಾಗಿದೆ. ಬಹಳಷ್ಟು ಬಿಜೆಪಿ ಭಾಗಿದಾರರು ಹಿಂದುತ್ವದ ಅಜೆಂಡಾವನ್ನು ವಿರೋಧಿಸುವ ಬಹುತೇಕ ಪಕ್ಷಗಳು ಪ್ರಾದೇಶಿಕವಾಗಿ ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸುತ್ತಿದ್ದು, ಮುಂದೆ ವೈರುಧ್ಯಗಳು, ಸಂಘರ್ಷವೂ ಹೆಚ್ಚಲಿದೆ. ಮೈತ್ರಿಯ ಸನ್ನಿವೇಶವನ್ನೇ ಬಳಸಿ ಬಿಜೆಪಿ-ಆರ್‌ಎಸ್‌ಎಸ್ ಕೂಟ ಆಯಾ ರಾಜ್ಯಗಳಲ್ಲಿ ಕೋಮುವಾದದ ವಿಷ ಹರಡಲು ತೊಡಗಲಿದೆ. ಡಿಎಂಕೆಯಂತಹ ಪಕ್ಷವು ತನ್ನ ಎದುರಾಳಿ ಎಐಡಿಎಂಕೆಯ ಕಾರಣದಿಂದ ಮಾತ್ರ ಬಿಜೆಪಿ ಜೊತೆಗಿದೆ. ಹೀಗೆ ಹಲವು ಲೆಕ್ಕಾಚಾರ, ರಾಜಕೀಯ ಆಟಗಳಿಂದ ವೈರುಧ್ಯಗಳು ಬೆಳೆಯುವುದು ಅನಿವಾರ್ಯ.

ಇದಲ್ಲದೇ ಆರ್‌ಎಸ್‌ಎಸ್ ಸುಮ್ಮನೇ ಕುಳಿತುಕೊಳ್ಳುವದು ಸಾಧ್ಯವಿಲ್ಲ. ತನ್ನ ಫ್ಯಾಸಿಸ್ಟ್ ಮಾದರಿ ಅಜೆಂಡಾವನ್ನು ಜಾರಿಗೊಳಿಸಲು ಬಿಜೆಪಿ ಸರ್ಕಾರದ ಮೇಲೆ ಸದಾ ಒತ್ತಡ ಹೇರುತ್ತದೆ. ಈಗಾಗಲೇ ಆರ್‌ಎಸ್‌ಎಸ್ ಮುಖ್ಯಸ್ಥ ರಾಜೇಂದ್ರ ಸಿಂಗ್ ಕಾಶಿ, ಮಥುರಾಗಳ ದೇವಸ್ಥಾನ ಹಿಂದುಗಳಿಗೆ ಹಿಂದುರುಗಿಸಲು ಮುಸ್ಲಿಮರಿಗೆ ತಾಕೀತು ಮಾಡಿದ್ದಾರೆ. ಶಿವಸೇನೆ-ಯಥಾರೀತಿ ಛಿದ್ರಕಾರಿ ಕೋಮುವಾದಿ ಆಟ ಮುಂದುವರಿಸಲಿದೆ. ಇಂತಹ ಸನ್ನಿವೇಶದಲ್ಲಿ ಡಿಎಂಕೆ-ಟಿಡಿಪಿ ಪಕ್ಷಗಳ ಪಾಡು ಕಷ್ಟಕರದ್ದು. ಉಳಿದ ಕೆಲವು ಪಕ್ಷಗಳದ್ದು ಇದೇ ಸ್ಥಿತಿ - ಹೀಗಾಗಿ ಇಂದಿನ ಸ್ಥಿತಿ ತುಂಬಾ ಕ್ಲಿಷ್ಟ.

ಹೀಗಿರುವಾಗ ಬಿಜೆಪಿ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ದೊಡ್ಡ ವ್ಯಾಪಾರಸ್ಥರ, ಏಕಸ್ವಾಮ್ಯ ಬಂಡವಾಳಗಾರರ ಪರವಾದದ್ದು. ಅಂದರೆ ಜನತೆಯ ಮೇಲೆ ತೆರಿಗೆಗಳು, ಬೆಲೆ ಏರಿಕೆ, ಅಭಿವೃದ್ಧಿಯ ಕಡಿತದ ಹೊರೆ ಹೇರಲಾಗುವುದು ಎಂದರ್ಥ. ಹೀಗಾದಾಗ ಜನತೆಯ ಸಂಕಷ್ಟಗಳು ಹೆಚ್ಚಾಗಿ ಪ್ರತಿರೋಧವು ಬೆಳೆದು ಅವರ ಹಿಡಿತ ಕೈ ತಪ್ಪಲಿದೆ. ಉಳಿದ ಭಾಗೀದಾರ ಪಕ್ಷಗಳೂ ಸಹ ಇದನ್ನು ವಿರೋಧಿಸದೇ ಗತಿ ಇಲ್ಲ. ಇತ್ತೀಚೆಗಿನ ಡಿಸೇಲ್ ನ ಬೆಲೆ ಶೇ 40 ರಷ್ಟು ಹೆಚ್ಚಿಸಿದಾಗ ಓಂಪ್ರಕಾಶ್ ಚೌತಾಲ ಬಹಿರಂಗ ವಾಗಿಯೇ ಹೂಂಕರಿಸಿದರು. ಇಂತಹ ಆರ್ಥಿಕ ನೀತಿಗಳಿಂದ ಭಿನ್ನ ಹಾದಿ ಹಿಡಿಯಲು ಬಿಜೆಪಿಗೆ ಸಾಧ್ಯವೇ?

ಜನರನ್ನು ಸಂಕಷ್ಟಕ್ಕೀಡು ಮಾಡುತ್ತಿರುವಾಗ, ಅತೃಪ್ತಿ ಬೆಳೆಯುತ್ತಿರುವಾಗ ಎಡ, ಪ್ರಜಾಸತ್ತಾತ್ಮಕ, ಮತನಿರಪೇಕ್ಷ ಶಕ್ತಿಗಳು ಜನರನ್ನು ಸಂಘಟಿಸಿ, ಹೋರಾಡಲು ಮುಂದಾಗಬೇಕು. ಮತ ನಿರಪೇಕ್ಷಿತ ಶಕ್ತಿಗಳು ಒಂದಾಗಿ, ಕೋಮುವಾದಿ ಬಿಜೆಪಿ ಮತ್ತು ಆದರ ರಕ್ತ ಸಂಬಂದಿಗಳನ್ನು ಎದುರಿಸಬೇಕು. ವಿಶಾಲ ಜನಸಮೂಹವನ್ನು ಅಣಿನೆರೆಸುವಲ್ಲಿ ಜನತೆಯ, ದೇಶದ ಹಿತ ಕಾಪಾಡುವಲ್ಲಿ ಎಡಶಕ್ತಿಗಳ ಪಾತ್ರ ಅತೀ ಮಹತ್ವದ್ದು.

ಬಿಜೆಪಿ ಮತ್ತು ಮಿತ್ರ ಪಕ್ಷಗಳು

	1999	1998
ಬಿಜೆಪಿ	182	178
ಬಿಜು ಜನತಾದಳ (ಒರಿಸ್ಸಾ)	10	9
ಡಿ.ಎಂ.ಕೆ.	12	6
ಎಚ್.ವಿ.ಸಿ	1	0
ಲೋಕದಳ	5	4
ಜೆ.ಡಿ. (ಯು)	20	12
(ಸಮತ)		
(ಲೋಕಶಕ್ತಿ)		3
ಲೋಕತಾಂತ್ರಿಕ (ಉತ್ತರ ಪ್ರದೇಶ)	1	0
ಎಂ.ಡಿ.ಎಂ.ಕೆ.(ತ. ನಾಡು)	4	3
ಎಂ.ಜಿ.ಆರ್.ಡಿ.ಕೆ. (ತ.ನಾಡು)	1	0
ಎಂ.ಎಸ್.ಸಿ.ಪಿ	1	0
ಪಿ.ಎಂ.ಕೆ. (ತ.ನಾಡು)	5	4
ಅಕಾಲಿದಳ	2	8
ಶಿವಸೇನಾ	15	6
ತೃಣಮೂಲಕಾಂಗ್ರೆಸ್	8	7
ತೆಲುಗು ದೇಶಂ	29	12
ಒಟ್ಟು	298	296

ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು


	1999	1998
ಕಾಂಗ್ರೆಸ್	112	143
ಎ.ಐ.ಎ.ಡಿ.ಎಂ.ಕೆ.	10	18
ಕೇರಳ ಕಾಂಗ್ರೆಸ್ ಎಂ.	1	1
ಮುಸ್ಲಿಂ ಲೀಗ್	2	2
ಆರ್.ಜೆ.ಡಿ.	7	17
ಆರ್.ಎಲ್.ಡಿ	2	0
ಒಟ್ಟು	136	134

ಎಡರಂಗ

	1999	1998
ಸಿಪಿಐ(ಎಂ)	32	32
ಸಿಪಿಐ	4	9
ಫಾರ್ವಡ್ ಬ್ಲಾಕ್	2	2
ಕೇರಳ ಕಾಂಗ್ರೆಸ್	1	0
ಆರ್.ಎಸ್.ಪಿ.	3	5
ಒಟ್ಟು	42	48

ಇತರರು

	1999	1998
ಬಿ.ಎಸ್.ಪಿ.	14	5
ಸಮಾಜವಾದಿ	26	21
ನ್ಯಾಷನಲ್ ಕಾಂಗ್ರೆಸ್	4	2
ಪಕ್ಷೇತರರು ಮತ್ತು ಇತರರು	21	6
ಒಟ್ಟು	65	65



1 - ಬಿ.ಜೆ.ಪಿ. ಮತ್ತು ಮಿತ್ರ ಪಕ್ಷಗಳು

2 - ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು

3 - ಎಡರಂಗ

4 - ಇತರೆ

ಕೇರಳ ಲೋಕಸಭಾ ಚುನಾವಣಾ ಫಲಿತಾಂಶ

ಕ್ಷೇತ್ರ	ಗೆದ್ದ ಅಭ್ಯರ್ಥಿಗಳು	ಎಲ್.ಡಿ.ಎಫ್		ಯು.ಡಿ.ಎಫ್		ಬಿಜೆಪಿ	
		1999	1988	1999	1998	1999	1998
ಕಾಸರಗೋಡು	ಟಿ. ಗೋವಿಂದನ್ ಸಿಪಿಐ(ಎಂ)	4,23,564	3,95,910	3,91,986	3.57,670	1,01,934	1,03,093
ಕಣ್ಣೂರು	ಎ.ಪಿ. ಅಬ್ದುಲ್ ತುಟ್ಟಿ	4,28,239	3,78,285	4,17,940	3,80,465	26,065	42,760
ಬಡಗರ	ಎ.ಕೆ. ಪ್ರೇಮುನುಜಂ ಸಿಪಿಐ(ಎಂ)	4,04,355	4,07,921	3,78,511	3,48,673	62,593	69,569
ಪಾಲ್ಘಾಟ್	ಎನ್.ಎನ್. ಕೃಷ್ಣದಾಸ್ ಸಿಪಿಐ(ಎಂ)	3,71,714	3,34,963	3,41,110	3,20,941	87,879	61,419
ಚಿರಯಿಕ್ಕಿಂಲ್	ವರಕಳ ರಾಧಕೃಷ್ಣನ್ ಸಿಪಿಐ(ಎಂ)	3,09,304	3,21,479	3.06,176	3.13,937	63,889	47,249
ಒಟ್ಟಪಾಳಂ	ಎಸ್. ಅಜಯ ಕುಮಾರ್ ಸಿಪಿಐ(ಎಂ)	3,59,758	3,35,376	3,46,042	3,15,576	66,426	65,002
ಕೊಟ್ಟಾಯಂ	ಕೆ. ಸುರೇಶಕುರುಪ್ ಸಿಪಿಐ(ಎಂ)	3,44,296	3,35,893	3,33,697	3,30,477	41,531	42,830
ಕೊಲ್ಲಂ	ಪಿ. ರಾಜೇಂದ್ರನ್ ಸಿಪಿಐ(ಎಂ)	3,51,827	3,96,145	3,32,586	3,44,383	42,579	56,916
ಇಡುಕ್ಕಿ	ಪ್ರಾನ್ಸಿಸ್ ಜಾರ್ಜ್, ಕೆ.ಸಿ(ಜೆ)	3,65,313	3,27,649	3,56,015	3,33,999	35,497	46,130
ಕೋಳಿಕೋಡ್	ಕೆ. ಮುರುಳಿಧರನ್ ಕಾಂಗ್ರೆ	3,33,023	3,37,863	3,83,425	3,56,139	83,862	84,000
ಮಂಚೇರಿ	ಇ. ಅಹಮದ್	3,14,152	2,94,600	4,37,563	4,00,609	-	79,546
ಪೊನ್ನಾನಿ	ಜಿ.ಎನ್. ಬನತ್‌ವಾಲ	2,43,094	2,40,217	3,22,572	3,44,461	66,426	65,008
ತ್ರಿಶೂರ್	ಎ.ಎಸ್. ಜೋಸ್	3,32,161	3,40,261	3,43,793	3,21,807	44,354	58,386
ಮುಕುಂದ ಪುರಂ	ಕೆ. ಕರುಣಕರನ್	3,44,693	3,38,966	3,97,156	3,47,945	30,774	54,479
ಎರ್ನಾಕುಲಂ	ಜಾರ್ಜ್	2,82,753	3,14,879	3,94,058	3,89,387	77,640	62,262
ಮೂವಾಟ ಪುರ	ಪಿ.ಸಿ. ಥಾಮಸ್	2,78,169	2,42,359	3,54,593	3,56,168	47,614	50,738
ಅಲಪ್ಪುಳ	ವಿ.ಎನ್. ಸುಧೀರನ್	3,57,606	3,46,543	3,92,700	3,86,180	27,682	27,010
ಮೊವಲಿಕರ	ರಮೇಶ ಚೆನ್ನಿತಲ್ಲ	2,74,029	2,73,740	3,07,417	2,75,001	27,682	68,450
ಅಡೂವರ್	ಕೆ. ಸುರೇಶ	3,12,286	3,33,293	3,33,902	3,16,292	43,524	34,816
ತಿರುವನಂತಪುರ	ಶಿವಕುಮಾರ್	2,27,905	3,22,031	2,83,390	3,37,429	1,58,221	77,640

ಪಶ್ಚಿಮ ಬಂಗಾಲ ಲೋಕಸಭಾ ಕ್ಷೇತ್ರಗಳಲ್ಲಿ 1999 ಮತ್ತು 1998 ರಲ್ಲಿ ಆಯ್ಕೆಯಾದ ಪಕ್ಷಗಳು ಗಳಿಸಿದ ಮತಗಳ ವಿವರ

ಪಕ್ಷಗಳು	ಸ್ಥಾನಗಳು	ಮತಗಳು	ಶೇಖಡ	ಸ್ಥಾನಗಳು	ಶೇಖಡ
ಸಿಪಿಐ(ಎಂ)	21	11,549622	32.91	24	35.43
ಸಿಪಿಐ	3	1218811	3.47	3	3.65
ಫಾರ್ವರ್ಡ್‌ಬ್ಲಾಕ್	2	1215911	3.46	2	3.31
ಆರ್.ಎಸ್.ಪಿ	3	1497430	4.27	4	4.49
ಎಡರಂಗ	29	15481774	44.11	33	46.87
ಕಾಂಗ್ರೆಸ್	3	4389329	12.51	1	15.23
ತೃಣಮೂಲ ಕಾಂಗ್ರೆಸ್	8	8983593	25.59	7	24.48
ಬಿಜೆಪಿ	2	3925318	11.18	1	10.06
ಬಿಜೆಪಿ ಮತ್ತು ಟಿಎಂಸಿ	10	12908911	36.78	8	34.54
ಇತರೆ	0	556863	1.59	0	0

ಒರಿಸ್ಸಾ ಲೋಕಸಭಾ ಕ್ಷೇತ್ರ

	1999	1998
ಒಟ್ಟು ಸ್ಥಾನಗಳು	21	
ಬಿಜೆಪಿ	9	7
ಬಿಜೆಡಿ	10	9
ಕಾಂಗ್ರೆಸ್	2	5

ಮಧ್ಯಪ್ರದೇಶ ಲೋಕಸಭಾ ಕ್ಷೇತ್ರ

	1999	1998
ಒಟ್ಟು ಸ್ಥಾನಗಳು	40	-
ಬಿಜೆಪಿ	29	-
ಕಾಂಗ್ರೆಸ್	11	-

ದೆಹಲಿ ಲೋಕಸಭಾ ಕ್ಷೇತ್ರ

	1999	1998
ಒಟ್ಟು ಸ್ಥಾನಗಳು	7	-
ಬಿಜೆಪಿ	7	-
ಕಾಂಗ್ರೆಸ್	0	-

ಅಸ್ಸಾಂ ಲೋಕಸಭಾ ಕ್ಷೇತ್ರ

	1999	1998
ಒಟ್ಟು ಸ್ಥಾನಗಳು	14	-
ಬಿಜೆಪಿ	2	-
ಕಾಂಗ್ರೆಸ್	9	-
ಇತರೆ	1	-

ತ್ರಿಪುರಾ

	1999	1998
ಒಟ್ಟು ಸ್ಥಾನಗಳು	2	-
ಸಿಪಿಐ(ಎಂ)	2	2
ತೃಣಮೂಲ ಕಾಂಗ್ರೆಸ್	0	0
ಕಾಂಗ್ರೆಸ್	0	0

ಕೇರಳ ಲೋಕಸಭಾ ಕ್ಷೇತ್ರ

	1999	1998
ಒಟ್ಟು ಸ್ಥಾನಗಳು	20	-
ಯು.ಡಿ.ಎಫ್	11	-
ಸಿಪಿಐ(ಎಂ)	8	-
ಕೇರಳ ಕಾಂಗ್ರೆಸ್ (ಜೊಸೆಫ್)	1	
ಎಲ್.ಡಿ.ಎಫ್	9	9

ಪಶ್ಚಿಮ ಬಂಗಾಲ ಲೋಕಸಭಾ ಕ್ಷೇತ್ರ

	1999	1998
ಒಟ್ಟು ಸ್ಥಾನಗಳು	42	
ಸಿಪಿಐ(ಎಂ)	21	24
ಸಿಪಿಐ	3	3
ಆರ್.ಎಸ್.ಪಿ	3	4
ಫಾರ್ವರ್ಡ್ ಬ್ಲಾಕ್	2	2
ಎಡರಂಗ	29	33
ತೃಣಮೂಲ ಕಾಂಗ್ರೆಸ್	8	7
ಬಿಜೆಪಿ	2	1
ಒಟ್ಟು	10	8
ಕಾಂಗ್ರೆಸ್	3	

ಬಿಹಾರ್ ಲೋಕಸಭಾ ಕ್ಷೇತ್ರ

ಒಟ್ಟುಸ್ಥಾನಗಳು 54 ಚುನಾವಣೆ 50ರಲ್ಲಿ ಮಾತ್ರ

	1999	1998
ಒಟ್ಟು ಸ್ಥನಗಳು	50,	
ಆರ್.ಜೆ.ಡಿ	7	17
ಬಿಜೆಪಿ	22	19
ಜೆಡಿ(ಯು)	17	11
ಕಾಂಗ್ರೆಸ್	3	5

ಜಮ್ಮು ಮತ್ತು ಕಾಶ್ಮೀರ ಲೋಕಸಭಾ ಕ್ಷೇತ್ರ

	1999	1998
ಒಟ್ಟು ಸ್ಥಾನಗಳು	6	
ನ್ಯಾಷನಲ್ ಕಾಂಗ್ರೆಸ್	4	
ಬಿಜೆಪಿ	2	
ಕಾಂಗ್ರೆಸ್ (ಐ)	0	

ಹರಿಯಾಣ

	1999	1998
ಒಟ್ಟು ಸ್ಥಾನಗಳು	10	4
ಲೋಕದಳ	5	4
ಬಿಜೆಪಿ	5	1
ಹೆಚ್.ವಿ.ಪಿ.	0	1

ಪಂಜಾಬ್

	1999	1998
ಒಟ್ಟು ಸ್ಥಾನಗಳು	13	11
ಬಿಜೆಪಿ ಮತ್ತ ಅಕಾಲಿ	3	2
ಕಾಂಗ್ರೆಸ್	8	
ಸಿಪಿಐ	1	0
ಎನ್.ಎ.ಡಿ.ಎಂ	1	

ಉತ್ತರ ಪ್ರದೇಶ

	1999	1998
ಒಟ್ಟು ಸ್ಥಾನಗಳು	85	
ಬಿಜೆಪಿ	29	
ಬಿಜೆಪಿ ಮಿತ್ರ ಪಕ್ಷಗಳು	3	
ಬಿ.ಎಸ್.ಪಿ	14	5
ಎಸ್.ಪಿ	26	21
ಕಾಂಗ್ರೆಸ್	10	0
ಸಮಾಜವಾದಿ ಜನತಾ ಪಾರ್ಟಿ	1	1

ಗೋವಾ ಲೋಕಸಭಾ ಕ್ಷೇತ್ರ

ಒಟ್ಟು ಸ್ಥಾನಗಳು	2
ಬಿಜೆಪಿ	2

ಮಿಜರೋಮ್ ಲೋಕಸಭಾ ಕ್ಷೇತ್ರ

ಒಟ್ಟು ಸ್ಥಾನಗಳು	1
ಪಕ್ಷೇತರ	1


ರಾಜಸ್ತಾನ್ ಲೋಕಸಭಾಕ್ಷೇತ್ರ

ಒಟ್ಟು ಸ್ಥಾನಗಳು	25
ಬಿಜೆಪಿ	16
ಕಾಂಗ್ರೆಸ್	9

ಕಾಂಗ್ರೆಸ್ ಸರ್ಕಾರದ ಬಗ್ಗೆ ಎದ್ದು ಬಂದ ಚಳುವಳಿಯ ಅಲೆ, ಅದನ್ನು ಬಗ್ಗುಬಡಿಯಲು ಪೋಲೀಸರ ದೌರ್ಜನ್ಯ, ದಬ್ಬಾಳಿಕೆಗಳು, ಅದಕ್ಕಾಗಿಯೇ ಒಂದು ಕರಾಳ ಕಾನೂನು ಇವುಗಳ ಬಗ್ಗೆ ಓದಿದ್ದೀರಿ.

ಮುಂದೆ ಓದಿ.........

ಮಾಸದ ನೆನಪುಗಳು (ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಭಾಗ-15

ಮಸೂದೆ ವಿರುದ್ಧದ ಚಳುವಳಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಧಾನಸಭೆಯ ಅಧಿವೇಶನ ನಡೆಯುತ್ತಿರುವಾಗಲೂ ಹೊರಗಡೆ ಪ್ರತಿಭಟನಾ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಮಸೂದೆಗೆ ಸಂಬಂಧಪಟ್ಟ ತಿದ್ದುಪಡಿಗಳನ್ನು ಮಂಡಿಸುವಂತೆ ಪಕ್ಷ ನನಗೆ ನಿರ್ದೇಶನ ನೀಡಿತು. ನಾನು 60 ತಿದ್ದುಪಡಿಗಳನ್ನು ಮಾಡಿದೆ. 60 ತಿದ್ದುಪಡಿಗಳ ಮೇಲೆ ಮತದಾನ ನಡೆಯಬೇಕು. ಎಂದು ಆಗ್ರಹಿಸಿದೆ. ರತನ್‌ಲಾಲ್ ಬ್ರಹ್ಮನ್ ಕೂಡ ತಿದ್ದುಪಡಿಗಳನ್ನು ಸೂಚಿಸಿದರು. ಮುಸ್ಲಿಂ ಲೀಗ್ ಸದಸ್ಯರು ನನ್ನ ಕೆಲವು ತಿದ್ದುಪಡಿಗಳಿಗೆ ಬೆಂಬಲ ಸೂಚಿಸಿದರು. ಕೆಲವರ ಬಗ್ಗೆ ಮೌನವಾಗಿದ್ದರು. ಒಟ್ಟಾರೆಯಾಗಿ ಅವರು ಮಸೂದೆಗೆ ವಿರೋಧವಾಗಿದ್ದರು.

ಜನವರಿ 5 ರಂದು ಆರಂಭವಾದ ಚರ್ಚೆ 15 ರಂದು ಮುಕ್ತಾಯವಾಯಿತು. ಆ ದಿನ 46-12 ಮತಗಳಿಂದ ಅಂಗೀಕಾರವಾದ ಮಸೂದೆ ಕಾನೂನು ಆಯಿತು. ಇದ್ದಕ್ಕಿದ್ದಂತೆ ಮಸೂದೆಯನ್ನು ಅಂಗೀಕರಿಸುವ ಕಾಂಗ್ರೆಸ್‌ನ ಯೋಜನೆ ವಿಫಲವಾಗಿ 10 ದಿನಗಳವರೆಗೆ ಕಾಯಬೇಕಾಯಿತು.

ಕಾಂಗ್ರೆಸ್‌ನ ಬಹುತೇಕ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ನಿಹರೇಂಕು ದತ್ತ ಮಜುಂದಾರ್ ಅವರನ್ನು ಬಿಟ್ಟು ಬೇರೆಯಾರೂ ಕಮ್ಯೂನಿಸ್ಟ್ ಪಕ್ಷದ ವಿರುದ್ಧ ವಿಷ ಕಾರಲಿಲ್ಲ.

'ಕಮ್ಯೂನಿಸ್ಟ್ ಪಕ್ಷ ಅರಾಜಕತೆ ಹುಟ್ಟಿಸುತ್ತಿದೆ. ಅದನ್ನು ಎದುರಿಸಲು ಇಂಥ ಒಂದು ಕಾನೂನಿನ ಅಗತ್ಯವಿದೆ ಎಂಬುದು ಮಜುಂದಾರ್ ಭಾಷಣದ ಸಾರವಾಗಿತ್ತು. ಕಾಂಗ್ರೆಸ್ ಸದಸ್ಯ ವಿನೋದ ಕುಮಾರ ಸಿನ್ಹ ಕಮ್ಯುನಿಸ್ಟ್‌ರ ವಿರುದ ಒಂದೇ ಒಂದು ಮಾತನ್ನೂ ಆಡಲಿಲ್ಲ. ವಾಸ್ತವವಾಗಿ ಈ ಕಾನೂನಿನಿಂದ ಒಳ್ಳೆಯದಕ್ಕಿಂತ ಕೆಟ್ಟದ್ದೇ ಆಗುತ್ತದೆ. ಎಂದು ಸಿನ್ಹ ಒಪ್ಪಿಕೊಂಡರು. ಆದರೆ ಅದೇ ಉಸಿರಿನಲ್ಲಿ ಅದನ್ನು ಸಮರ್ಥಿಸಿಕೊಂಡರೂ ಕೂಡ 'ಅಸಾಮಾನ್ಯ ಪರಿಸ್ಥಿತಿ' ಹಿನ್ನೆಲೆಯಲ್ಲಿ ಈ ಕಾನೂನು ಅಗತ್ಯ ಎಂದರು.

ಈ ಅಸಾಮಾನ್ಯ ಪರಿಸ್ಥಿತಿ ಏನೆಂಬುದನ್ನು ಮಾತ್ರ ವಿವರಿಸುವ ಗೋಜಿಗೆ ಯಾರೂ ಹೋಗಲಿಲ್ಲ! ಈ ಮಸೂದೆ ಸಂಪೂರ್ಣವಾಗಿ ಕಾರ್ಮಿಕ ವರ್ಗದ ವಿರುದ್ಧವಾಗಿದೆ ಎಂದು ಚರ್ಚೆಯ ಕೊನೆಯದಿನ ರತನ್‌ಲಾಲ್ ಬ್ರಹ್ಮನ್ ಹೇಳಿದರು.

(ಕಾಂಗ್ರೆಸ್ ಭಿನ್ನಮತ ಅಡಗಿಸಲು)

ಮಸೂದೆ ಮೇಲಿನ ಚರ್ಚೆ ಆರಂಭವಾಗುವ ಕೆಲವು ದಿನಗಳ ಮುಂಚೆ ಸರ್ದಾರ್ ವಲ್ಲಭಭಾಯಿ ಪಟೇಲ್ ಕಲ್ಕತ್ತಕ್ಕೆ ಬಂದರು. ಮಸೂದೆಯ ವಿರುದ್ಧ ಕೆಲವು ಕಾಂಗ್ರೆಸ್ ಸದಸ್ಯರಲ್ಲಿ ಇದ್ದ ಭಿನ್ನಾಭಿಪ್ರಾಯಗಳನ್ನು ಗಮನಿಸಲು ಅವರನ್ನು ಕರೆಸಲಾಗಿತ್ತು. ಕಲ್ಕತ್ತಾ ನಗರ ಮತ್ತು ಇತರ ಕಡೆಗಳಲ್ಲಿ ಪಟೇಲ್ ಹಲವು ಸಭೆಗಳನ್ನುದ್ದೇಶಿಸಿ ಮಾತನಾಡಿದರು.

ಪಶ್ಚಿಮ ಬಂಗಾಳದ ಮೇಲೆ ಮಸೂದೆಯನ್ನು ಏಕಾಏಕಿ ಹೇರಲು ಕಾಂಗ್ರೆಸ್ ಸರಕಾರಕ್ಕೆ ಸಾಧ್ಯವಾಗಲಿಲ್ಲ. ಉತ್ತರ ಪ್ರದೇಶ ಮತ್ತು ಮುಂಬಯಿಯಂಥ ಪ್ರದೇಶಗಳಲ್ಲಿ ಇಂಥ ಕಾನೂನು ಈಗಾಗಲೇ ಜಾರಿಯಲ್ಲಿದೆ ಎಂದು ಪ್ರಧಾನಿ ಜವಾಹರಲಾಲ್ ನೆಹರೂ ಹೇಳಿದರು. ಚರ್ಚೆಯ ವೇಳೆ ವಿಧಾನಸಭೆಯಲ್ಲಿ ನಾನು ಹೀಗೆ ಹೇಳಿದೆ.

"ನಮ್ಮ ಪಕ್ಷ ಮತ್ತು ಇತರ ಎಲ್ಲ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಈ ಮಸೂದೆಗೆ ವಿರೋಧವಾಗಿವೆ. ಈ ಶಕ್ತಿಗಳ ಪರವಾಗಿ ನಾನು ಮಾತನಾಡುತ್ತೇನೆ. ಈ ಮಸೂದೆಯ ಬಗ್ಗೆ ಕಾಂಗ್ರೆಸ್ಸಲ್ಲೇ ವಿರೋಧ ವ್ಯಕ್ತಪಡಿಸುತ್ತಿರುವ ಭಿನ್ನಮತೀಯ ಶಕ್ತಿಗಳ ಧ್ವನಿ ಅಡಗಿಸಲು ಸರ್ದಾರ್ ಪಟೇಲರನ್ನು ಕರೆಸಲಾಗಿದೆ ಎಂದು ನನಗೆ ಗೊತ್ತಾಗಿದೆ. ಪ್ರತಿಭಟನೆಯಿಲ್ಲದೆ ಮಸೂದೆ ಅಂಗೀಕಾರವಾಗಲು ಬಿಡಲಿಲ್ಲ ಎಂದು ಪಶ್ಚಿಮ ಬಂಗಾಳ ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಬ್ರಿಟಿಷ್ ಆಡಳಿತ ಕಾಲದಲ್ಲಿ ಕರಾಳ ಕಾನೂನುಗಳನ್ನು ವಿರೋಧಿಸಿದ ಮುಖಂಡರೇ ಈಗ ಇಂಥ ಕ್ರಮಗಳಲ್ಲಿ ಶಾಮೀಲಾಗುತ್ತಿದ್ದಾರೆ. ನಾವು ಎಡಪಂಥೀಯರು ರಾಷ್ಟ್ರೀಯತೆಯ ಪಂಜನ್ನು ಎತ್ತಿ ಹಿಡಿಯುತ್ತಿದ್ದೇವೆ, ಕಾಂಗ್ರೆಸಿಗರು ಅದನ್ನು ಕೈ ಬಿಟ್ಟಿದ್ದಾರೆ.'

ಜಾಹಿರಾತು ಸ್ಥಗಿತ

ರಾಜ್ಯದ ನೀತಿಗಳನ್ನು ಟೀಕಿಸಿದ್ದಕ್ಕಾಗಿ ಬಂಗಾಳ ಪ್ರಾಂತೀಯ ಸಮಿತಿಯ ದೈನಿಕ 'ಸ್ವಾದೀನತಾ'ಕ್ಕೆ ಸರಕಾರ ಜಾಹಿರಾತು ನೀಡುವುದನ್ನು ನಿಲ್ಲಿಸಿದೆ ಎಂದು ಚರ್ಚೆಯ ಕೊನೆ ದಿನ ನಾನು ಪ್ರಸ್ತಾಪಿಸಿದೆ. ಕರಾಳ ಕಾಯಿದೆ ವಿರುದ್ಧದ ನಮ್ಮ ಹೋರಾಟ ಕೊನೆಗೊಂಡಿಲ್ಲ, ಈ ಅನುಭವ ಹಾಗೂ ತೊಂದರೆಗಳು ಜನರಲಿ ಸ್ಫೂರ್ತಿ ತುಂಬಲು ಸಹಕಾರವಾಗಿದೆ ಎಂದು ಹೇಳಿದೆ.

ಮಸೂದೆ ಮೇಲೆ ತಿದ್ದುಪಡಿಗಳನ್ನು ರೂಪಿಸಲು ನನಗೆ ಮತ್ತು ಇತರರಿಗೆ ಭೂತೇಶ್ ಗುಪ್ತಾರಂಥ ಬ್ಯಾರಿಸ್ಟರ್‌ಗಳು ನೆರವಾದರು. ನನ್ನ ಭಾಷಣಗಳಿಗೆ ಕೂಡ ಭೂತೇಶ್ ನೆರವಾದರು. ಮಸೂದೆ ಕುರಿತ ನಮ್ಮ ಎಚ್ಚರಿಕೆಗಳು ಮತ್ತು ಅನುಮಾನಗಳು ಸರಿಯಾದವು ಎಂಬುದು ಆಮೇಲೆ ಸಾಬೀತಾಯಿತು. 1948 ಮತ್ತು 1966ರ ನಡುವೆ ಸಾವಿರಾರು ಕಾರ್ಮಿಕರನ್ನು ಸುಳ್ಳು ಆರೋಪಗಳ ಮೇಲೆ ಬಂಧಿಸಲಾಯಿತು.

ಮುಖ್ಯಮಂತ್ರಿ ಪದಚ್ಯುತಿ

ಮಸೂದೆ ಅಂಗೀಕಾರವಾದ ಕೂಡಲೆ ಅಸೆಂಬ್ಲಿ ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹೋಯಿತು. ಇದಾದ ತಕ್ಷಣವೇ ಡಾ. ಘೋಷ್ ಸರಕಾರ ಪದಚ್ಯುತಿಗೊಂಡಿತು. ಡಾ. ಬಿ.ಸಿ.ರಾಯ್ ಹೊಸ ಮುಖ್ಯಮಂತ್ರಿ ಆದರು.

ಕಿರಣ್ ಶಂಕರರಾಯ್ ಹೊಸ ಗೃಹಮಂತ್ರಿಯಾದರು, ಹಣಕಾಸು ಖಾತೆ ನಳಿನಿರಂಜನ್ ಸರ್ಕಾರ್ ಪಾಲಾಯಿತು. ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ತೆರೆಯಿತು. ಡಾ. ರಾಯ್ ಹೊಸ ಮುಖ್ಯಮಂತ್ರಿ ಆಗಬೇಕೆಂಬುದು ಗಾಂಧೀಜಿಯ ಇಚ್ಛೆಯಾಗಿತ್ತು. ಆದರೆ ಡಾ. ಘೋಷ್ ಹಠಾತ್ ಪದಚ್ಯುತಿಗೆ ಕಾರಣವಾಯಿತು ಎಂಬುದು ನನಗೆ ನಂತರ ತಿಳಿದು ಬಂತು.

ಮಹಿಳೆಯರನ್ನು ಕೀವಲವಾಗಿ ಕಂಡ ಮಂತ್ರಿ

1948 ಫೆಬ್ರವರಿಯಲ್ಲಿ ಬಜೆಟ್ ಅಧಿವೇಶನ ಆರಂಭ. ಆ ತಿಂಗಳ ಒಂದು ದಿನ ಬೆಳಿಗ್ಗೆ ಅಸೆಂಬ್ಲಿಯಲ್ಲಿ ನನ್ನ ಸೀಟಿನ ಬಳಿ ಡಾ. ಬಿ.ಸಿ. ರಾಯ್ ಹಠಾತ್ತನೆ ಬಂದು ಹೀಗೆ ಹೇಳಿದರು. 'ನೀವು ಡಾ.ಎನ್.ಕೆ. ಬಸು ಅವರ ಮಗನೆಂದು ನನಗೆ ಗೊತ್ತು. ಡಾ. ಬಸು ನನ್ನ ಒಳ್ಳೆಯ ಮಿತ್ರ. ಆದರೆ ನಿಮಗೆ ಒಂದು ಮಾತು ಹೇಳುತ್ತೇನೆ. ಈ ತಿದ್ದುಪಡಿಗಳು ಇವೆಲ್ಲ ಏನೂ ನಡೆಯುವುದಿಲ್ಲ" ಕರಾಳ ಕಾನೂನಿಗೆ ಮಂಡಿಸಲಾದ ತಿದ್ದುಪಡಿಗಳ ಬಗ್ಗೆ ಅವರು ಮಾತನಾಡುತ್ತಿದ್ದರೆಂಬುದು ಸ್ಪಷ್ಟವಾಗಿತ್ತು.

ನೀಲರತನ ಸರ್ಕಾರದ ಹಿಂದೂಸ್ತಾನ್ ಇನ್ಷೂರೆನ್ಸ್ ಬಿಲ್ಡಿಂಗ್‌ನಲ್ಲಿ ದೀರ್ಘಕಾಲದಿಂದ ನಾವು ಬಾಡಿಗೆಗೆ ಇದ್ದೆವು. ನಾವು ಉತ್ತಮ ನೆರೆ ಹೊರೆಯವರಾಗಿದ್ದೆವು. ಆದರೆ ಒಂದು ದಿನ ಅಸೆಂಬ್ಲಿಯಲ್ಲಿ ಡಾ. ಸರ್ಕಾರ್ ನನ್ನ ಮೇಲೆ ವೈಯಕ್ತಿಕ ನೆಲೆಯಲ್ಲಿ ಆಕ್ರಮಣ ಮಾಡಿದರು. 'ನಿಮ್ಮ ಚಟುವಟಿಕೆಗಳು ಇಡೀ ರಾಜ್ಯಕ್ಕೆ ಗೊತ್ತು' ಎಂದು ಹೇಳಿ ನಾನು ಅವರನ್ನು ಎದುರಿಸಿದೆ.

ಇನ್ನೊಂದು ಘಟನೆಯೂ ನನಗೆ ನೆನಪಾಗುತ್ತಿದೆ. ಮಹಿಳಾ ರಕ್ಷಣಾ ಸಮಿತಿಯ ಕೆಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮಣಿಕುಂತಲ ಸೇನ್ ಮತ್ತು ಇತರ ಕೆಲವು ನಾಯಕರು ರೈಟರ್ಸ್ ಬಿಲ್ಡಿಂಗ್‌ಗೆ ಮೆರವಣಿಗೆಯಲ್ಲಿ ಬಂದರು. ಪೊಲೀಸರು ಮೆರವಣಿಗೆಕಾರರನ್ನು ಒಳಗೆ ಬರಲು ಬಿಡಲಿಲ್ಲ. ಆ ವೇಳೆ ನಾನು ಅಲ್ಲಿದ್ದೆ.

[illegible] ಹೊರಗೆ ನಿಂತು ಘೋಷಣೆಗಳನ್ನು ಕೂಗಿದರು. ಗೃಹಸಚಿವ ಕಿರಣ್ ಶಂಕರರಾಯ್ ಮಹಿಳೆಯರ ನಿಯೋಗದ ಜತೆ ಮಾತನಾಡುವಂತೆ ಮಾಡಲು ನಾನು ತುಂಬಾ ಪ್ರಯತ್ನಪಟ್ಟೆ.

ಆ ಹೊತ್ತಿಗೆ ಡಾ.ಸರ್ಕಾರ್ ನನ್ನನ್ನು ಕರೆ ಕಳಿಸಿದರು. "ನಾನು ನಿನ್ನೆ ನಿಮ್ಮ ಜೊತೆ ಜಗಳವಾಡಿದೆ. ನಿಮ್ಮ ಕುಟುಂಬ ನನಗೆ ಚೆನ್ನಾಗಿ ಗೊತ್ತು ದಯವಿಟ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಡಿ' ಎಂದವರು ಹೇಳಿದರು.

ಕಿರಣ್‌ರಾಯ್ ನನ್ನನ್ನು ಕರೆಸಿದರು. ಹೊರಗೆ ಬಂದು ಮಹಿಳೆಯರ ಜೊತೆ ಮಾತಾಡುವಂತೆ ನಾನು ಅವರಿಗೆ ಸೂಚಿಸಿದೆ. ಅದಕ್ಕೆ ಅವರು ನೀಡಿದ ಉತ್ತರ ಆಘಾತಕಾರಿಯಾಗಿತ್ತು.

"ಮಹಿಳೆಯರ ಜತೆ ಮಾತನಾಡಿ ಪ್ರಯೋಜನವಿಲ್ಲ ಅವರು ತರ್ಕವನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅವರ ಬೇಡಿಕೆಗಳನ್ನು ಬರವಣಿಗೆಯಲ್ಲಿ ಸಲ್ಲಿಸಲು ಹೇಳಿ ಅದನ್ನು ನಾನು ಪರಿಶೀಲಿಸುತ್ತೇನೆ" ಎಂದು ಹೇಳಿದರು. ನಾನು ಅದನ್ನು ಮಹಿಳೆಯರಿಗೆ ತಿಳಿಸಿದಾಗ ಅವರು ಮರಳಿ ಹೋದರು.

ಮಹಾಧಿವೇಶನದಲ್ಲಿ

ಭಾರತ ಕಮ್ಯುನಿಸ್ಟ್ ಪಕ್ಷದ ಎರಡನೇ ಮಹಾಧಿವೇಶನ ಕಲ್ಕತ್ತದ ಮಹಮದ್ ಅಲಿ ಪಾರ್ಕ್‌ನಲ್ಲಿ 1948ರ ಫೆಬ್ರವರಿ 28ರಿಂದ ಮಾರ್ಚ್ 6ರವರೆಗೆ ನಡೆಯಿತು. ಈ ಮಹಾಧಿವೇಶನ ಸದಸ್ಯತ್ವ ನೀತಿ ಮತ್ತು ಕೆಲಸದ ಸಂಸ್ಕೃತಿಯಲ್ಲಿ ಬದಲಾವಣೆಗಳನ್ನು ಮಾಡಿತು. ಪಿ.ಸಿ. ಜೋಷಿಯವರ ಸ್ಥಾನದಲ್ಲಿ ಬಿ.ಟಿ.ರಣದಿವೆ ಪ್ರಧಾನ ಕಾರ್ಯದರ್ಶಿ ಆದರು. ಪ.ಬಂಗಾಳ ನಿಯೋಗದ ಸದಸ್ಯರಾಗಿ ನಾನು ಈ ಕಾಂಗ್ರೆಸ್‌ನಲ್ಲಿ ಪಾಲ್ಗೊಂಡೆ. ಕಾಂಗ್ರೆಸ್ ಅಂಗೀಕರಿಸಿದ ರಾಜಕೀಯ ಸಿದ್ಧಾಂತದ (Political thesis) ಬಗ್ಗೆ ಪ್ರಶ್ನೆಗಳನ್ನು ಎತ್ತಿದವರಲ್ಲಿ ನಾನೂ ಒಬ್ಬನಾಗಿದ್ದೆ.

ಜೋಷಿ ಮಾಡಿದ್ದ ಅನೇಕ ತಪ್ಪುಗಳನ್ನು ಸರಿಪಡಿಸಲಾಯಿತು. ಆದರೆ ಹಾಗೆ ಮಾಡುವ ಪ್ರಕ್ರಿಯೆಯಲ್ಲಿ ಪಕ್ಷದಲ್ಲಿ ನಿರ್ಲಕ್ಷತನ (Reeklesesness) ಹಣತಿ ಹಾಕುವ ಸುಳಿವು ಕಾಣತೊಡಗಿತ್ತು. ಇದರಿಂದ ಪಕ್ಷಕ್ಕೆ ಹಾನಿಯಾಗುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿತ್ತು.

ಮಹಾಧಿವೇಶನದಲ್ಲಿ ಮಾತನಾಡಲು ನನಗೆ ಅವಕಾಶ ಸಿಗಲಿಲ್ಲ, ಆದರೆ ಕಾರ್ಯದರ್ಶಿ ಮಂಡಳಿಗೆ ಒಂದು ಪ್ರಶ್ನಾವಳಿಯನ್ನು ಕಳಿಸಿದೆ. ಬಂಗಾಳ ಪ್ರಾಂತೀಯ ಕಾರ್ಯದರ್ಶಿ ಭಬನಿ ಸೇನ್ ಮರುದಿನ ರಾಜ್ಯಸಮಿತಿಯ ಸಭೆ ಕರೆದರು. ರಾಜಕೀಯ ಸಿದ್ಧಾಂತದ ಬಗ್ಗೆ ಪ್ರಶ್ನೆಗಳನ್ನೆತ್ತಿದ ನಮಗೆ ಕ್ಷಮೆ ಕೋರುವಂತೆ ಸೂಚಿಸಿದರು. ಅದರ ಅಂಶಗಳನ್ನು ಕಾಂಗ್ರೆಸ್‌ನಲ್ಲಿ ಓದಿ ಹೇಳಲಾಯಿತು.

ಹೊಸರಾಜಕೀಯ ಸಿದ್ಧಾಂತದ ಪ್ರಕಾರ ಕೆಲಸವನ್ನು ಆರಂಭಿಸಲಾಯಿತು. ನಮ್ಮ ಕೆಲವು ಸಂಘಟನಾತ್ಮಕ ದೌರ್ಬಲ್ಯಗಳ ಪ್ರಯೋಜನ ಪಡೆಯಲು ಕಾಂಗ್ರೆಸ್ ಸರಕಾರ ಪ್ರಯತ್ನಿಸಿತು. ನಮ್ಮ ವಿರುದ ಎಲ್ಲಾ ರೀತಿಯ ಆಕ್ರಮಣಕ್ಕೆ ಸಿದ್ಧತೆ ನಡೆಸಿತು. ಗೃಹಖಾತೆಯ ಕೆಲವು ರಹಸ್ಯ ದಾಖಲೆ ಪತ್ರಗಳು ಆಗ ನಮಗೆ ಸಿಕ್ಕಿದವು. ಕಮ್ಯೂನಿಸ್ಟ್ ಪಕ್ಷ ಭಯೋತ್ಪಾದಕ ಕೃತ್ಯಗಳನ್ನು ನಡೆಸಲಿದೆ ಎಂದು ಅದರಲ್ಲಿ ವಿವರಿಸಲಾಗಿತ್ತು. ಹೀಗಾಗಿ ಪಕ್ಷದ ಕೆಲವು ನಾಯಕರ ಮೇಲೆ ನಿಗಾ ಇಡುವುದು ಅಗತ್ಯ ಎಂದು ತಿಳಿಸಲಾಗಿತ್ತು.

ಕಮ್ಯುನಿಸ್ಟ್‌ರ ವ್ಯಾಪಕ ಬಂಧನದ ಬಗ್ಗೆ ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ನಮಗೆ ಸುಳಿವು ನೀಡಿದ್ದರು. ಬಂಗಾಳದಲ್ಲಿ ಪಕ್ಷವನ್ನು ಕಾನೂನು ಬಾಹಿರ ಎಂದು ಘೋಷಿಸಲಾಗುವ ಸಾಧ್ಯತೆ ಬಗ್ಗೆಯೂ ಹೇಳಿದರು. ಏನಿದ್ದರೂ ಈ ಎಚ್ಚರಿಕೆಯ ಹೊರತಾಗಿಯೂ ನಮ್ಮ ಪಕ್ಷದ ಮುಖಂಡರು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ. ಬಹುಶಃ ಅಧಿಕಾರಿ ನೀಡಿದ ಈ ಸುಳಿವಿಗೆ ಪಕ್ಷ ಮಹತ್ವ ನೀಡಲಿಲ್ಲ.

ಈ ಸಂದರ್ಭದಲ್ಲಿ, ಅಸೆಂಬ್ಲಿ ಅಧಿವೇಶನ ನಡೆಯುತ್ತಿದ್ದಾಗಿನ ಒಂದು ಘಟನೆ ನೆನಪಾಗುತ್ತದೆ. ಸಚಿವ ಹೇಮಚಂದ್ರ ನಸ್ಕರ್ ಜತೆ ನನ್ನ ಸಂಬಂಧ ಉತ್ತಮವಾಗಿತ್ತು. ಪಕ್ಷವನ್ನು ನಿಜವಾಗಿಯೂ ಕಾನೂನುಬಾಹಿರ ಎಂದು ಘೋಷಿಸುವ ಕೆಲದಿನಗಳ ಮುಂಚೆ ಅವರು ಅಸೆಂಬ್ಲಿಯಲ್ಲಿ ನನ್ನನ್ನು ಭೇಟಿಯಾಗಿ ಒಂದು ಪಾನ್ ಬೀಡಾ ನನಗೆ ಕೊಟ್ಟು ಎಚ್ಚರಿಕೆ ನೀಡಿದರು.

"ಜ್ಯೋತಿ, ನಾನು ನಿನ್ನೊಂದಿಗೆ ಮಾತಾಡಬಯಸುತ್ತೇನೆ. ಆದರೆ ದಯವಿಟ್ಟು ಹುಷಾರಾಗಿರು. ನಾವು ಆಮೇಲೆ ಮಾತಾಡೋಣ' ಎಂದರು.

ಇದಾದ ಮೇಲೆ ಹೇಮ್‌ಬಾಬು ಅವರನ್ನು ಹುಡುಕಲು ನನಗೆ ಆಗಲಿಲ್ಲ. ಅವರು ನನಗೆ ಕೆಲವು ಅಧಿಕೃತ ಮಾಹಿತಿ ನೀಡಬಹುದಾಗಿತ್ತು.

(ಮುಂದುವರಿಯುವುದು)



1947 EARTH ದೇಶ ವಿಭಜನೆಯಿಂದ ಛಿದ್ರಗೊಂಡ ಸಾಮಾಜಿಕ ಜೀವನ

1947 ಸ್ವಾತಂತ್ರ್ಯ ಸಂದರ್ಭದಲ್ಲಿನ ದೇಶ ವಿಭಜನೆ ಸಾಮಾಜಿಕ ಜೀವನದ ಮೇಲೆ ಬೀರಿದ ಹೃದಯ ವಿದ್ರಾವಕ ಪರಿಣಾಮದ ಚಿತ್ರಣ. ನಮ್ಮ ದೇಶದ ಪ್ರಸಿದ್ಧ ಮಹಿಳಾ ನಿರ್ದೇಶಕಿ ದೀಪಾ ಮೆಹ್ತಾ ರವರ ನಿರ್ದೇಶನದ ಚಿತ್ರ. ಫಾರ್ಸಿ ಕುಟುಂಬದ ಪೋಲಿಯೋ ಪೀಡಿತ ತುಂಟಬಾಲಕಿ ಅವಳ ರಕ್ಷಣೆಗಾಗಿ ನೇಮಿಸಲ್ಪಟ್ಟಿದ್ದ ಆಯಾ ಇವರ ಜೀವನದ ಘಟನೆಗಳ ಮೂಲಕ ಅಂದಿನ ಸನ್ನಿವೇಶದಲ್ಲಿನ ಮಾನವೀಯ ಸಂಬಂಧಗಳನ್ನು ವಿಶ್ಲೇಷಿಸಲು ನಿರ್ದೇಶಕಿ ಯತ್ನಿಸಿದ್ದಾರೆ.

ತನ್ನ ವಯಸ್ಸಿಗೆ ಸಹಜವಾದ ಕತೂಹಲ, ಚೇಷ್ಟೆಗಳ ಆರೋಗ್ಯಕರ ಮನಸ್ಸಿನ ಈ ಬಾಲಕಿಯ ರಕ್ಷಣೆಗೆ ಆಯಾ ಆಗಿರುವ ಶಾಂತಬಾಯಿ(ನಂದಿತಾ ದಾಸ್) ಒಬ್ಬ ಅವಿವಾಹಿತ ತರುಣಿ. ಆಯಾಳದ್ದೇ ಆದ ಗೆಳೆಯರ ಪ್ರಪಂಚದಲ್ಲಿ ಅವಳಂತೆಯೇ ದುಡಿದು ಜೀವಿಸುವ ಐಸ್ ಕ್ಯಾಂಡಿ ಮಾರಾಟಗಾರ(ಅಮೀರ್ ಖಾನ್), ಮಾಲೀಷ್ ತೈಲ ಮಾರಾಟಗಾರ (ರಾಹುಲ್ ಖನ್ನಾ), ಅದೇ ಮನೆಯಲ್ಲಿ ಕೆಲಸ ಮಾಡುವ ಇತರರು ಇದರಲ್ಲಿ ಲಾಹೋರ್ ನಗರದ ಸಹಜ ಮುಸ್ಲಿಂ, ಸಿಖ್ ಧರ್ಮೀಯರೆಲ್ಲಾ ಇದ್ದಾರೆ. ಆಗಾಗ್ಗೆ ಪಾರ್ಸಿ ಬಾಲಕಿಯನ್ನು ತಿರುಗಾಟಕ್ಕೆ ಒಯ್ದಾಗ ಪಾರ್ಕಿನಲ್ಲಿ ಇವರೆಲ್ಲಾ ಕೂಡಿ ಹರಟೆ, ತಮಾಷೆ, ಸಲ್ಲಾಪಗಳಲ್ಲಿ ತೊಡಗುವರು ಇವರ ನಡುವೆ ಸಾಕ್ಷಿಯಾಗಿ ಕುಳಿತ ಮೇಲು ವರ್ಗದ ತನ್ನ ಮನೆಯ ಕುಟುಂಬಕ್ಕೆ ಸೇರಿದ ಬಾಲಕಿಗೆ ಇವರ ಮೂಲಕ ತನ್ನ ಮನೆಯ ಜನ ಸಾಮಾನ್ಯರ ಅವರ ಸರಸ ಸಂಭಾಷಣೆಗಳ ಜೀವಂತಿಕೆಯ ಲೋಕದ ಪರಿಚಯ.

ಈ ಸ್ನೇಹಿತ ಬಳಗದಲ್ಲಿ ಧರ್ಮ ಮುಖ್ಯವಾಗುವುದಿಲ್ಲ. ಯಾವುದೇ ಧರ್ಮದವರಾಗಿದ್ದರೂ ಮಾನವ ಸಹಜ ಗುಣಗಳೇ ಅವರ ಭಾಂಧವ್ಯದ ಆಧಾರ. ಈ ಬಳಗದಲ್ಲಿ ಹಿಂದೂ ಆದ ಆಯಾಳನ್ನು ಪ್ರೀತಿಸುವವರು ಇಬ್ಬರು. ಇಬ್ಬರೂ ಮುಸ್ಲಿಮರೇ. ಆಯಾ ಇಬ್ಬರ ಜೊತೆಯೂ ಸ್ನೇಹದಿಂದಿದ್ದರೂ ಮಾಲಿಶ್ ತೈಲ್ ವಾಲಾನನ್ನು ಪ್ರೀತಿಸುತ್ತಿರುತ್ತಾಳೆ.

ಹೀಗೆ ಸರಸ, ತಮಾಷೆ, ಪ್ರೀತಿ, ಸಹ ಬಾಳ್ವೆಯ ಪ್ರಶಾಂತ ಜೀವನದ ನಡುವೆ ದೇಶವನ್ನು ವಿಭಜನೆ ಮಾಡುತ್ತಾರೆಂಬ ಸುದ್ದಿ ಧುತ್ತೆಂದು ಬಂದೆರಗುತ್ತದೆ. ಆಗ ಲಾಹೋರ್ ಯಾವ ದೇಶದಲ್ಲಿರುತ್ತದೆ, ಮುಂದೆ ಏನಾಗುತ್ತದೆ ಎಂಬ ಬಗ್ಗೆ ಚರ್ಚೆಗಳು ಬಿರುಸಿನವಾಗ್ವಾದಗಳೂ ಆರಂಭವಾಗುತ್ತದೆ. ನಿಧಾನವಾಗಿ ಧರ್ಮ ಮುಖ್ಯವಾಗತೊಡಗುತ್ತದೆ. ಈ ಸ್ನೇಹ ಬಳಗದಲ್ಲಿ ಒಬ್ಬಿಬ್ಬರು ಮೌಲ್ಯಗಳ ಮುಸ್ಲಿಂ ಲೀಗ್‌ನ ವಕ್ತಾರರಂತೆ ವರ್ತಿಸಲಾರಂಭಿಸಿದಾಗ ಉಳಿದವರು ಅದನ್ನು ಖಂಡಿಸುತ್ತಾರೆ. ಮುಂದೆಯೂ ನಾವೆಲ್ಲಾ ಒಟ್ಟಿಗೆ ಇರಬಹುದಲ್ಲವೇ ಎಂದೇ ಅವರ ಮನಸ್ಸು. ಆದರೆ ದಿನದಿಂದ ದಿನಕ್ಕೆ ಆಗುವ ಕ್ಷಿಪ್ರ ಬದಲಾವಣೆಗಳು, ಭಾರತದಿಂದ ಬರತೊಡಗಿದ ನಿರಾಶ್ರಿತರ ಮಹಾಪೂರ ವಾತಾವರಣವನ್ನು ಗಡಚು ಮಾಡುತ್ತದೆ. ಹಿಂದೂಗಳು, ಸಿಖ್ಖರು ಒಲ್ಲದ ಮನಸ್ಸಿನಿಂದ ಲಾಹೋರ್ ಬಿಟ್ಟು ಅಂದರೆ ಪಾಕೀಸ್ತಾನಕ್ಕೆ ಸೇರುವ ಪ್ರದೇಶಗಳನ್ನು ಬಿಟ್ಟು ತಮ್ಮ ಮೂಲ ಬೇರುಗಳನ್ನು ಕಿತ್ತು ಭಾರತಕ್ಕೆ ಹೋಗುವ ನಿರ್ಧಾರಕ್ಕೆ ಬರತೊಡಗುತ್ತಾರೆ. ಶಾಂತಬಾಯಿಗೆ ಅವಳ ಫಾರ್ಸಿ ಮಾಲಕರೆ ಲಾಹೋರ್ ಬಿಡಲು ಸೂಚ್ಯವಾಗಿ ತಿಳಿಸಿದರೂ ಶಾಂತಬಾಯಿ ಅಲ್ಲಿನ ಪ್ರೀತಿಪರ ವಾತಾವರಣದಲ್ಲಿಯೇ ಶಾಂತಬಾಯಿ ಇರುವ ನಿರ್ಧಾರ ಮಾಡುತ್ತಾಳೆ.

ಆದರೆ ನಾವೆಲ್ಲಾ ಒಂದೇ ಮುಂದೆಯೂ ಹಾಗೇ ಇರುವುಕ್ಕೇನು ಕಷ್ಟ, ಅಪಾಯ ಬಂದರೆ ಪರಸ್ಪರರನ್ನು ರಕ್ಷಿಸೋಣ ಎನ್ನುತ್ತಿದ್ದ ಐಸ್ ಕ್ಯಾಂಡಿ ವಾಲಾನ ಬದುಕಿನಲ್ಲಿ ದೊಡ್ಡ ದುರ್ಘಟನೆ ಬಂದೆರಗುತ್ತದೆ. ಅಮೃತಸರದಿಂದ ಬರಬೇಕಾಗಿದ್ದ ಅವನ ಕುಟುಂಬ-ತಂದೆ ತಾಯಿ ಸೋದರಿಯರಿಗಾಗಿ ರೈಲ್ವೆ ನಿಲ್ದಾಣಧಲ್ಲಿ ಕಾಯುತ್ತಿದ್ದಾಗ ರೈಲು ಬರುತ್ತದೆ. ಅವನ ಕುಟುಂಬದವರ್‍ಯಾರೂ ಬರುವುದಿಲ್ಲ. ಅವನ ಕುಟುಂಬ ಮಾತ್ರವಲ್ಲ ಇಡೀ ರೈಲಿನಲ್ಲಿ ಯಾರೂ ಇರುವುದಿಲ್ಲ. ಎಲ್ಲರೂ ರಕ್ತ ತೊಟ್ಟಿಕ್ಕುವ, ಕೈ ಕಾಲು ಕಳೆದುಕೊಂಡ ರುಂಡ-ಮುಂಡಗಳು ಬೇರೆಯಾದ ಶವಗಳ ರಾಶಿಯಾಗಿ ಬಿಟ್ಟಿರುತ್ತಾರೆ. ತನ್ನ ಕುಟುಂಬದವರನ್ನು ನೋಡಲು ಬೋಗಿಯೊಳಕ್ಕೆ ನುಗ್ಗಿದ ಐಸ್ ಕ್ಯಾಂಡಿವಾಲನನ್ನು ಈ ಹೃದಯ ವಿದ್ರಾವಕ ದೃಶ್ಯ ಎದುರುಗೊಳ್ಳುತ್ತದೆ. (ಖುಶವಂತ್ ಸಿಂಗರ ಪಾಕೀಸ್ತಾನಕ್ಕೆ ಬಂದ ರೈಲು- ನೆನಪಿಗೆ ಬರುತ್ತದೆ.) ಈ ಘಟನೆ ಅವನನ್ನು ಒಬ್ಬ ಚುರುಕಾದ ತುಂಟ, ಮಾನವ ಸಹಜ ಪ್ರೀತಿ ಪ್ರೇಮಗಳ ಯುವಕನ ಸ್ಥಿತಿಯಿಂದ ಒಬ್ಬ ಹಿಂದೂ ದ್ವೇಷಿ ಮತಾಂಧನನ್ನಾಗಿ ಪರಿವರ್ತಿಸುತ್ತದೆ.

ಇದು ಶಾಂತಾಬಾಯಿಯನ್ನು ಭಯ ವಿಹ್ವಲಳಾಗುವಂತೆ ಮಾಡುತ್ತದೆ. ಅವನ ಪ್ರೇಮ ನಿವೇದನೆಯನ್ನು ಶಾಂತ ನಿರಾಕರಿಸುತ್ತಾಳೆ. ಆಗ ಅವಳು ಪ್ರೀತಿಸುತ್ತಿದ್ದ ಯುವಕ ತೇಲ್ ವಾಲಾ ತಾನೂ ಅವಳ ಜೊತೆ ಅಮೃತಸರಕ್ಕೆ ಬಂದು ಹಿಂದೂವಾಗಿ ಅವಳನ್ನು ವಿವಾಹವಾಗುವ ಭರವಸೆ ನೀಡಿ ಸಂತೈಸುತ್ತಾನೆ. ಇದನ್ನು ಕೇಳಿಸಿಕೊಂಡ ಐಸ್ ಕ್ಯಾಂಡಿ ವಾಲಾನಲ್ಲಿ ದ್ವೇಷ ಉಕ್ಕೇರುತ್ತದೆ.

ಇಡೀ ಲಾಹೋರ್‌ನಲ್ಲಿ ಕೋಮುದಂಗೆಯ ಬೆಂಕಿ ಉರಿಯತೊಡಗುತ್ತದೆ. ಎಲ್ಲೆಲ್ಲೂ ಲೂಟಿ ಕೊಲೆಗಳು ಅದೇ ಸಂದರ್ಭದವನ್ನೂ ಪ್ರಯೋಗಿಸಿ ಶಾಂತಾಳ ಪ್ರೇಮಕ್ಕೆ ಪ್ರತಿಸ್ಪರ್ಧಿಯ ಕೊಲೆ ಮಾಡಲಾಗುತ್ತದೆ. ಶಾಂತಾ ಲಾಹೋರ್ ಗೆ ಹೋಗುವುದನ್ನು ತಪ್ಪಿಸಲು ದಂಗೆಕೋರರೊಡಗೂಡಿ ಬಂದು ಐಸ್ ಕ್ಯಾಂಡಿವಾಲಾ ಅವಳನ್ನು ಅಪಹರಿಸುತ್ತಾನೆ.

ಈ ಹಂತದಲ್ಲಿ ವೇಗದಿಂದ ಸಾಗುತ್ತಿದ್ದ ಚಲನ ಚಿತ್ರ ಹಠಾತ್ತನೆ ಕೊನೆಯಾಗುತ್ತದೆ. ಶಾಂತ ಬ್ರಿಟಿಷ ಚಕ್ರವರ್ತಿಯ ಪ್ರತಿಮೆಯೊಂದರ ಬಳಿ ಕುಳಿತ್ತಿದ ದೃಶ್ಯದೊಡನೆ ಅವಳ ಇರುವಿಕೆ ಬಗ್ಗೆ ಹುಟ್ಟಿದ ನಾನಾ ವದಂತಿಗಳನ್ನು ಪ್ರೇಕ್ಷಕರ ಮುಂದಿಡಲಾಗುತ್ತದೆ. ಹೀಗೆ ಜೀವಂತಿಕೆಯಿಂದ ನಳನಳಿಸುತ್ತಿದ್ದ ತರುಣಿಯೊಬ್ಬಳು ತನ್ನ ಪ್ರಿಯನನ್ನು ಕಳೆದು ಕೊಂಡು ಕೇವಲ ದಂತಕಥೆಗಳ ವಸ್ತುವಾಗಿ ಬಿಡುವಂತ ದುರಂತವನ್ನು ನಮ್ಮ ಕಣ್ಣೆದುರು ನಿಲ್ಲಿಸುತ್ತಾರೆ.

ತನ್ನೆಲ್ಲಾ ಸರಸ, ವಿರಸ, ಸಮರಸಗಳಿಂದ ಸಾಗುತ್ತಿದ್ದ ಜನ ಜೀವನದ ಮೇಲೆ ಧುತ್ತೆಂದು ದೇಶ ವಿಭಜನೆಯಂತಹ ಬಿರುಗಾಳಿ ಬಂದೆರಗಿದಾಗ ಆಗುವ ಅಲ್ಲೋಲ ಕಲ್ಲೋಲವನ್ನು ಮನಮುಟ್ಟುವಂತೆ ನಿರ್ದೇಶಕಿ ಚಿತ್ರಿಸಿದ್ದಾರೆ.

ಮಾನವೀಯ ಸಂಬಂಧಗಳನ್ನು ಕೋಮುದ್ವೇಷದ ಪರಿಸರದಲ್ಲಿ ವ್ಯಕ್ತಿಗಳ ತೀವ್ರ ಬದಲಾವಣೆಯನ್ನು ಹೇಳುವ ಮೂಲಕ ಕೋಮುವಾದದ ವಿವಿಧ ಆಯಾಮಗಳನ್ನು ಮುಂದಿಡುವ ಈ ಚಲನ ಚಿತ್ರ ಇಂದಿನ ಸಂದರ್ಭಕ್ಕೆ ಒಂದು ಉತ್ತಮ ಕೊಡುಗೆ. ಅವಶ್ಯವಾಗಿ ನೋಡಬೇಕಾದ ಚಿತ್ರ.

ಮಾಮೂಲಿ ಮಸಾಲೆ ಚಿತ್ರಗಳ ಧಾಟಿಯನ್ನು ಬಿಟ್ಟು ವಾಸ್ತವ ಮಾರ್ಗದಲ್ಲಿ ಸಾಗಬಯಸುವ ಈ ಚಿತ್ರ ಪ್ರೇಕ್ಷಕರನ್ನು ಆಕರ್ಷಿಸಲು ಅನೇಕ ಜನಪ್ರಿಯ ಸಿನಿಮಾಗಳ ಮನರಂಜನಾತ್ಮಕ ಅಂಶಗಳನ್ನು ಬಳಸಿಕೊಳ್ಳುತ್ತದೆ. ಕಣ್ಣೀರು ಸುರಿಸುವ ಹಿಂಸಾಮಯ ಚಿತ್ರವಾಗಿ ಬಿಡುವ ಅಪಾಯದಿಂದ ತಪ್ಪಿಸುವಲ್ಲಿ ನಿರ್ದೇಶಕಿ ಯಶಸ್ವಿಯಾಗಿದ್ದಾರೆ. ಮಸಾಲೆ ಸಿನಿಮಾಗಳ ಶೈಲಿ ಹಾಗೂ ತಂತ್ರಗಳಿಗೆ ಒಗ್ಗಿ ಹೋಗಿರುವ ಪ್ರೇಕ್ಷಕರು ಸಿನಿಮಾವನ್ನು ಹೇಗೆ ಸ್ವಾಗತಿಸುತ್ತಾರೆ ಎಂಬುದು ಕಾದು ನೋಡಬೇಕಾದ ವಿಷಯ.

☐☐☐

> **ಪ್ರಪಂಚದ ಮರೆಮಾಚಿ ಹೋಗಿದ್ದ ಜಗದ ನಿಜಗಳನೆಲ್ಲ ಅರಿಯಲೆಂದಡಿಯಿಟ್ಟೆ,**
> ಮುಳ್ಳುಗಳ ಮೇಲೆ ನಿದ್ದೆ ಮಂಪರು ಕವಿದ ಮನಕುಲವನ್ನೆಚ್ಚರಿಸಿ ದುಡಿವ ಜನತೆಗೆ ಕಣ್ಣಾಗಿ ನಿಂತೆ.
> ತೊಟ್ಟ ಚಿಂದಿಯ ಕಂಡು ತೇಪೆ ಹಾಕುವ ಬದಲು ಹೊಸ ಬಟ್ಟೆಯನು ತರುವ ಕನಸು ಕಂಡೆ.
> ನೊಂದ ಎದೆಯಲ್ಲಿ ನಗೆಯ ಹೂವ ಅರಳಿಸಲೆಂದು ಹೋರಾಟಗಳ ಕಟ್ಟಿ ಕನವರಿಸಿದೆ
> ಕಾರ್ಲ್ ಮಾರ್ಕ್ಸ್ ಕವಿತೆಯಿಂದ - ಡಾ॥ ಸಿದ್ಧಲಿಂಗಯ್ಯ.


ಈ ಸಾವಿರ ವರ್ಷಗಳ ಮಹಾ ಚಿಂತಕ ಕಾರ್ಲ್ ಮಾರ್ಕ್ಸ್

ಶತಶತಮಾನಗಳ ಮಾನವನ ಇತಿಹಾಸ ದುದ್ದಕ್ಕೂ ಹುಗಿದಿದ್ದ ಶ್ರಮಜೀವಿಗಳ ಶೋಷಣೆ, ದಮನಗಳನ್ನು ವರ್ಗ ವಿಶ್ಲೇಷಣೆಯ ಪಾತಾಳಗರಡಿಯಿಂದ ಹಿಡಿದೆತ್ತಿ, ಬಿಗಿದ ಸರಳುಗಳನ್ನು ಕಡಿದೆಸೆಯುವ ಸಂಘರ್ಷದ ಸೈದ್ಧಾಂತಿಕ ಅಸ್ತ್ರ ಕೊಟ್ಟ ಮಹಾ ಮೇಧಾವಿ ಕ್ರಾಂತಿಕಾರಿ ಕಾರ್ಲ್ ಮಾರ್ಕ್ಸ್ ಇದೀಗ ಈ ಸಹಸ್ರಮಾನದ 'ಮಹಾ ಚಿಂತಕ' ಎಂದು ಜಗತ್ತಿನಾದ್ಯಂತ ಜನರಿಂದ ಆಯ್ಕೆ. ಸಹಜವಾಗಿಯೇ ಬಂಡವಾಳಶಾಹಿಗಳು, ಭಾರೀ ಪತ್ರಿಕೆಗಳೂ ಎಲ್ಲಿಲ್ಲದ ಸಂಕಟ, ಸಾವರಿಸಿಕೊಳ್ಳಲಾಗದಂತಹ ನಡುಕ ಈ 'ಸಹಸ್ರಮಾನದ ಮಹಾನ್ ಚಿಂತಕರಾರು?' ಎಂಬ ಪ್ರಶ್ನೆಯನ್ನು ಖ್ಯಾತ ' ಬಿಬಿಸಿ ಆನ್ ಲೈನ್ ' ಜಗದ ಓದುಗರ ಮುಂದಿರಿಸಿತು. ಮತ ನೀಡುವಂತೆ ಕೇಳಿತು.

' ಸಹಸ್ರಮಾನದ ಚಿಂತಕ' ಇನ್ನಾರಿರಲು ಸಾಧ್ಯ? ಕಾರ್ಲ್‌ಮಾರ್ಕ್ಸ್' ಎಂದು ವಿಶ್ವದ ಓದುಗರು ಸದ್ದು ಗದ್ದಲವಿಲ್ಲದಂತೆ ಮತ ಚಲಾಯಿಸಿದರು: ಯಾರೂ ಸಾಟಿಯಿಲ್ಲದಂತೆ ಓಟುಪಡೆದದ್ದು ಮಾರ್ಕ್ಸ್‌ರವರೇ. ಭಾರೀ ಅಂತರದ ನಂತರದಲ್ಲಿ ನಿಂತದ್ದು ಜಗದ್ವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಈ ಆಯ್ಕೆಯಲ್ಲಿ ಬಂದ ಇನ್ನಿತರ ಹೆಸರುಗಳೆಂದರೆ ಖ್ಯಾತ ವಿಜ್ಞಾನಿ ಸರ್ ಐಸಾಕ್ ನ್ಯೂಟನ್ ಜೀವ ವಿಕಾಸವಾದದ ಪ್ರತಿಪಾದಕ ಚಾರ್ಲ್ಸ್ ಡಾರ್ವಿನ್, ಸರ್ ಥಾಮಸ್ ಅಕ್ವಿನಾಸ್, ಭೌತವಿಜ್ಞಾನಿ ಸ್ಟೀಫನ್ ಹಾಕಿಂಗ್ ಇವಾನ್ನನ್ಸಿಯೆಲ್ ಕೌಂಟ್, ರೇನೆ ಡೆಸ್ಕಾರ್ಟೆಸ್, ಜೇಮ್ಸ್ ಕ್ಲರ್ಕ್ ಮಾಕ್ಸ್‌ಬೆಲ್, ಫ್ರೆಡ್ರಿಕ್ ನೈಟ್ಸೆ.

ಮಾರ್ಕ್ಸ್, "ಸಾವಿರಾರು ವಿಮೋಚನಾ ಹೋರಾಟಗಳನ್ನು ಅತ್ಯಂತ ಸ್ಫೂರ್ತಿಗೊಳಿಸಿದವರು ಆಧುನಿಕ ರಾಜಕೀಯ ಚಿಂತನೆಯ ಪಿತಾಮಹ" ಎಂದು ಅಭಿಪ್ರಾಯ ದಾಖಲಿಸಿದವರು ಅನೇಕರು. "ಬಂಡವಾಳಶಾಹಿ ಹೇಗೆ ಕೆಲಸ ಮಾಡುತ್ತಿದೆ ಎಂದು ನಿಖರವಾಗಿ ವಿಶ್ಲೇಷಿಸಿದರು ಮಾರ್ಕ್ಸ್‌ರವರು. ಕೆಲವು 19 ಮತ್ತು 20ನೇ ಶತಮಾನ ಮಾತ್ರವಲ್ಲ ಜಗದಗತಿ ಹೇಳುತ್ತಾ, ಇಂದಿನ ಮುಂದಿನ ಪ್ರಪಂಚವನ್ನು ಅರಿಯುವ ದೃಷ್ಟಿಕೋನ ನೀಡಿದವರು ಎಂದು ನೆನೆಯುವರು ಹಲವರು 'ಚಿಂತನೆ ಮತ್ತು ಕ್ರಿಯೆಗಳ ನಡುವಿನ ಅಗಾಧ ಅರ್ಥವನ್ನು ಜನರೆದುರು ತೆರೆದವರು ಮಾರ್ಕ್ಸ್" ಇತಿಹಾಸದಲ್ಲಿ ಅಚ್ಚರಿಯಾದ ಚಿಂತನೆಯ ಹೆಜ್ಜೆ ಮೂಡಿಸಿದ ವರು ಕಾರ್ಲ್‌ಮಾರ್ಕ್ಸ್" ಹೀಗೆ... ಎದೆಯಲ್ಲಿ ತುಂಬಿಬರುವ ಮಾತುಗಳು ಸಾವಿರಾರು ಹಾಗೇ ತುಂಬಿ ಬಂದದ್ದು ಮತಗಳು ಮಾರ್ಕ್ಸ್‌ರವರನ್ನು ತಮ ಟಿ.ವಿ. ಪತ್ರಿಕೆಗಳಂತಹ ನವ ಮಾಧ್ಯಮಗಳಲ್ಲಿ ಇಲ್ಲವಾಗಿಸಬಹುದು. ಆದರೆ ಜನರ ಮನದಿಂದ ಮರೆಮಾಡಲು ಸಾಧ್ಯವೇ ಇಲ್ಲ.

ಲಾಲ್ ಸಲಾಂ ಸಂಗಾತಿ



Reg. No. 17015/64 KRNM/BGS-405 MAG(2) PRBDECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist). Karnataka State Committee Editor : G.N. NAGARAJ